ರುವ ವೈಶ್ಯರ ವೆಂಕಟೇಶಶೆಟ್ಟಿಗೆ ಪ್ರತಿವಾದಿ ತಾಲ್ಲೂಕು ಮಜಕೂರು ನೆಲಗೊಂಡನ ಹಳ್ಳಿ ಬಸವಣ್ಣಯ್ಯನಿಂದ ಸಲ್ಲತಕ್ಕ ಡಿಕರೀ ಮೊಬಲಗ್ಗಾಗಿ ಜಫ್ತಿಯಲ್ಲಿ ಯಿರುವ ಪ್ರತಿವಾದಿಗಳ ಬಾಬತು ೩೬—೭—೦ ರೂಪಾಯಿಗಳ ಅಂದಾಜುವುಳ್ಳ ಚರಜಂದಿಗಿಯೂ ಮತ್ತು ಅಮಾನತ್ತು ಪ್ರತಿವಾದಿ ಮನೇಲಿರುವ ೨೯೦೦ ತೆಂಗಿನಕಾಯಿ ಸಹ್ವಾ ಸರ್ನ 1867ನೇ ಇಸವಿ ಮೇ ತಿಂಗಳು 20ನೇ ತಾರೀಖು 10 ಘಂಟೆಗೆ ಸದರೀ ನೆಲಗೊಂಡನಹಳ್ಳಿ ಗ್ರಾಮದಲ್ಲಿ ಹರಾಜು ಹಾಕಲ್ಪಡುತ್ತಾ ಇದ್ದರಿಂದ ದರಖಾಸ್ತು ಮಾಡತಕ್ಕ ಜನಗಳು ಸದರೀ ವೇಳಿಗೆ ಸರಿಯಾಗಿ ಹಾಜರಾಗ ಬೇಕು.

COLAR DISTRICT.

Notice regarding the sale by auction of movable and immovable property in satisfaction of a decree in the Chicka Bullapoor Talook on the 24th May 1867.

ಚಿಕ್ಕ ಬಳ್ಳಾಪುರ ತಾಲ್ಲೂಕು ಅಮಿಲ್ ಕೋರ್ಟಿನಿಂದಾ.

ಸರ್ನ ೧೮೬೭ನೇ ಯಿಸವಿ ಅಪ್ರಿಲ್ ನಂಬರು ೬೩.

ವಾದಿಯು ಈ ನಂಬರ್ ಪ್ರತಿವಾದಿಗಳ ಮೇಲೆ ಪಡದಿರುವ ಡಿಕ್ರಿಗಾಗಿ ಕೋರ್ಟು ಖರ್ಚು ದೇಖಿಲ್ ೮೮ ರೂಪಾಯಿಗಳ್ಗೆ ಗಾಗಿ ಪ್ರತಿವಾದಿಯು ಬಾಬತು ಜಫ್ತಾಗಿರುವ ೬೩—೧೦—೦ ರೂ॥ ಅಂದಾಜ್ ವುಳ್ಳ ಸ್ವಂತ ಜಂದಿಗೀಯು ಪೈಕಿ ೨೩—೧೦—೦ ರೂಪಾಯಿಗಳ ಅಂದಾಜಿನ ಚರಜಂದಿಗಿಯೂ, ೯ ರೂಪಾಯಿಗಳ್ಗ ಸ್ಥಿರ ಜಂದಿಗಿಯೂ, ಮೇ ತಾರೀಖ್ ೨೪ನೇ ತಾರೀಖಿನಲ್ಲಿ ಹರಾಜ್ ಆಗುವದರಿಂದ ಖಾಯಿಷ್ ವುಳ್ಳವರು ದರಖಾಸ್ತು ಮಾಡ ಬಹುದು

MYSORE DISTRICT.

Notice inviting claimants to certain unclaimed property, deposited in the Ashtagram Superintendent's Court, to appear and prefer their claims within 6 months from the 7th May 1867.

ಮೈಸೂರು ಡಿಸ್ಟ್ರಿಕ್ಟು ಡಿಪ್ಯೂಟಿ ಸೂಪರಿಂಟೆಂಡೆಂಟ್ ಕೋರ್ಟಿನಿಂದ.

ಸರ್ನ ೧೮೬೧ನೇ ಇಸವಿ ೨೫ನೇ ನಂಬರ್ ಅತ್ಯಿಗನುಗುಣವಾದ್ದು. ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ, ಅಷ್ಟಗ್ರಾಮ ಡಿವಿಜನ್ ಸೂಪರಿಂಟೆಂಡೆಂಟ್ ಸಾಹೇಬರವರ ಕೋರ್ಟು ಸರ್ನ ೧೮೬೬ನೇ ಇಸವಿ ಕ್ರಿಮಿನಲ್ ೧೫—೧೭—೨೦—೧೦ನೇ ಮತ್ತು ೧೫ನೇ ನಂಬರ್ ಮೊಕದ್ದಮೆಗಳಲ್ಲಿ ಹಾಜರಾದ ಮಾಲ್‌ಗಳ ವಿವರ.

೧ ಕಬ್ಬಿಣದ ಗೂಡ್ಲಿ.	೧ ಕಬ್ಬಿಣದ ಯಲಿ ವುಗರು.
೧ ಬಿಳೀ ಕಂಬಳಿಚೂರು.	೨ ನಗದು ರೂಪಾಯಿ.
೧ ಕಬ್ಬಿಣದ ಚಪ್ಪುಟು.	೨ ಕಂಬಳೀಗಳು.
೧ ಪಂಚೆ ವಂದು.	೧ ಶಲ್ಯ ಬಟ್ಟೆ.
೪ ಕೆಂಪು ವಸ್ತ್ರ.	೧ ಬಿಳೀಪಾಗು.
೧ ದುಬ್ಬಟಿ ವಂದು.	೧ ಹರಕು ಬಟ್ಟೆ.
೧ ಹರಕು ಬಟ್ಟೆ.	೧ ಶಲ್ಯ.

೧೧ ನಗದು ರೂಪಾಯಿ.	೧ ಕರಗತ್ತಿ.
೧ ಚಿನ್ನದ ದೊಡ್ಡ ಹಣ	೨ ಶೀರೆ ಶರಗು.
೧ ನಗದು ರೂಪಾಯಿ.	೨ ಹರಿವಾಣ.
೧ ವುಳೀ ವಂದು	೧ ಹಿತ್ತಾಳೆ ಸುಣ್ಣ ಕಾಯಿ.
೧ ಕಂಬಳೀ.	೧ ತವರದ ಪಟ್ಟಿ.
೧ ಚಂಬಿಗೆ ವಂದು.	೧ ಪಂಚೆ.
೧ ಬಿಳೀ ಪಂಚೆ.	೧ ದುಪಟಿ ವಂದು.
೧ ಚೇದಟ್ಟಿ.	೧ ಪಂಚೆ ವಂದು.
೧ ಬಿಳೀ ಪಾಗು.	೨ ಕೆಂಪು ಹರಳು ಹತ್ತ ಕಡಕು.
೨ ನಗದು ರೂಪಾಯಿ.	೨ ಬೆಳ್ಳಿ ಹರಳುಹತ್ತ ಕಡುಕು
೧ ಹಿಂಮುಡಿ ಜೀಲಾ	೧ ರಕ್ತದ ಬಟ್ಟೆ.
೧ ಚಿನ್ನದ ಮುರವು ಜೋಡಿ.	೨ ಶೀರು ಹರಳು.
೧ ಬೆಳ್ಳಿ ಬಂದಿ ವಂದು.	೩೩ ಕಬ್ಬಿಣದ ಸಲಾಖಿಗಳು.

ಈ ಬಾಬತ್ತು ಮಾಲ್‌ಗಳಿಗೆ ದಾವೆಯುಳ್ಳ ಮನುಷ್ಯರು ಇಸ್ತಿಹಾರಿನ ತಾರೀಖು ಲಾಗಾಯಿತು ಆರು ತಿಂಗಳು ವಳಗೆ ಈ ಕೋರ್ಟಿಗೆ ಹಾಜರಾಗಿ ತಮ್ಮ ದಾವೆಯನ್ನು ಸ್ಥಾಪಿಸಿಕೊಳ್ಳತಕ್ಕದ್ದಾಗಿ ಯಿದರಿಂದ ತಿಳಿಯಪಡಿಸಿ ಯಿರುತ್ತೆ.

ತಾರೀಖು ೭ನೇ ಮಾಹೆ ಮೇ ಸರ್ನ ೧೮೬೭ನೇ ಇಸವಿ, ಮೊಕ್ಕಾಂ ಮೈಸೂರು.

T. H. McRUTCHIN,

Notice regarding the sale of valuable movable and immovable property in satisfaction of a decree, at Mysore, on the 22nd May 1867.

ಮೈಸೂರು ಡಿ.. ಡಿಪ್ಯುಟಿ ಸೂಪರಿಂಟೆಂಡೆಂಟ್ ಕೋರ್ಟಿನಿಂದ.

ವಾದಿಗಳು.	ಪ್ರತಿವಾದಿ.
೧ನೇ ದೀನನಾಥಲಾಲಾ.	ಕೋಪರಮ್ಮ ಮುನಸ್ವಾಮಿ
೨ನೇ ನೇ ಬಾಲಮುಕುಂದ ದಾಸಲಾಲಾ.	ಶೆಟ್ಟಿ ಹೆಂಡತಿ ಪಾರ್ವತಮ್ಮ ವಗೈರೆ.

ಈ ನಂಬರ್ ಪ್ರತಿವಾದಿಯು ಡಿಕ್ರಿ ಮೊಬಲಗು ಸೂಪರಿಂಟೆಂಡೆಂಟ್ ಕೋರ್ಟು ೬೬ನೇ ಇಸವಿ ಅಪ್ರಿಲ್ ೧೩ನೇ ನಂಬರು ಫೈಸಲ್ ಮೇರೆ ಪ್ರತಿವಾದಿಯು ವಾದಿಗಳಿಗೆ ಕೊಡಬೇಕಾದ ಫೈಸಲ್ ಮೊಬಲಗು 7796—6—3 ಫೈಸಲ್ ಪೂರಾ ದೊರೆ ಬಡ್ಡಿ ಸಹ ಸದರಹೂ ಪ್ರತಿವಾದಿಗೆ ಕೊಡಲ್ಪಟ್ಟ ನೋಟೀಸ್ ವಾಯಿದೆ ಮೇರೆ ಹಾಜರು ಮಾಡುವದಕ್ಕೆ ತಪ್ಪಿ ಇರುತ್ತಾ ಆಗಿ ವಾದಿಗಳ ಖಾಯಿಷ್ ಮೇರೆ ಸಾಬಕು ಜಫ್ತಾಗಲ್ಪಟ್ಟ ಪ್ರತಿವಾದಿ ಬಾಬತು ಮುನಸಾಮಿಶೆಟ್ಟಿ ಅಂಡ್‌ಕೊ ಕಂಪನಿಯ ಇದರ ಮಾರ್ಜಿನಲ್ಲಿ ನಮೂದಿಸಿರುವ 144 ರೂಪಾಯಿಗಳ ಅಂದಾಜು ವುಳ್ಳ ಬಿಂಕ ಶಕರಾರು ಚರಜಂದಿಗೆಗಳನ್ನು ಜಾಲ್ತಿ ತಿಂಗಳು 22ನೇ ತಾರೀಖು 11 ಘಂಟೆಗೆ ಹರಾಜಿಗೆ ಷುರು ಮಾಡಿಸಿ ಯಾ ತಾರೀಖಿನಲ್ಲಿ ಯಾ ಮೇಲ್ಕಂಡ ಸಾಮಾನುಗಳು ಪೂರಾ ಹರಾಜಾಗುವ ತನಕಾ ಅದರ

ಸಂಣಾಪಿಸಾಯಿ
ಗಾಡಿ ಮೂಕಿಗಳು.
ಹಳೇ ಚಕ್ರಗಳು.
ಕುರುಜಿಗಳು.
ಚಿಲ್ಲರೆ ಕಬ್ಬಿಣದ ಸಾಮಾನು

ಸಾಗುವಾನಿ ಪೆಟ್ಟಿಗೆ.
ಚಿಕ್ಕದು ದೊಡ್ಡದು.
ಯೆತ್ತಿನ ಜೋಡಿಗಳು.
ನಾಲ್ಕು ಚಕ್ರದ ಗಾಡಿಗಳು.
ಎರಡು ಚಕ್ರದ ಗಾಡಿಗಳು.
ಶಿಕಸ್ತು—ದುರಸ್ತು ಸಹ.

ಈಚಿನ ತಾರೀಖು ಅಂದರೆ-ಕೋರ್ಟಾಗುವಂಥಾ ತಾರೀಖುಗಳಲ್ಲಿ ಯಾ ಕೋರ್ಟಿನ ಬಾಗಲಿನಲ್ಲಿ ಹರಾಜ್ ಮಾಡಿಸುತ್ತೆಯಾಗಿ ಖಾಯಿಷ್ವುಳ್ಳವರು ಆ ವ್ಯಾಳ್ಯೆಗೆ ಹಾಜರು ಇದ್ದು ತೆಗದುಕೊಳ್ಳ ಬಹದು. ಆ ಮೇರೆ ತೆಗದುಕೊಳ್ಳುವರು ಕೂಡ್ಲೆ ಹರಾಜ್ ಮೊಬಲಗನ್ನು ಹಾಜರು ಮಾಡಿದ ಮಾಲನ್ನು ಪಡದುಕೊಳ್ಳ ಬೇಕು ಅದಕ್ಕೆ ತಪ್ಪಿದರೆ ಯರಡನೇ ಹರಾಜ್ ಮಾಡಿಸುವದರಲ್ಲಿ ತಮ್ಮ ಜರೂರ್ ಮೊಬಲಗ್ಯೆ ಅವಲ್ ಹರಾಜ್‌ದಾರ ಜವಾಬ್‌ದಾರನಾಗಿರುತ್ತಾನೆ ಜಾಸ್ತಿ ಬಂದರೆ ಅವನಿಗೆ ಶಿಕ್ಕಲಾರದು.

ಬತಾರೀಖು ೮ನೇ ಮಾಹೇ ಮೇ ಸನ್ ೧೮೬೭ನೇ ಇಸವಿ.
ಮೊಕ್ಕಾಂ ತುಮಕೂರು.

T. M. McHUTCHIN,

CUDOOR DISTRICT.

Notice regarding the sale of immovable property in satisfaction of a decree, at Chickmoogloor, on the 20th & 23rd May 1867.

ಚಿಕ್ಕಮಗಳೂರು ತರ್ಫು ನಾ|| ಅ|| ಕೋರ್ಟು ಸನ್ ೧೮೬೬ನೇ
ಯಿಸವಿ ಒರಿಜಿನಲ್ ನಂಬರ್ ೬೧

ವಾದಿ ಚಿಕ್ಕಮಗಳೂರು ತಾಲ್ಲೂಕು ದೇವರಾಜಪೇಟೆಯಲ್ಲಿರುವ ವಿಜಾಪುರದ ಮೀರಾಹುಸೇನಿನ ಫೈಸಲ್ ವಗೈರೆ ರೂಪಾಯಿ ೩೯೪||| ಮತ್ತು ಪಾವತೀ ವರಿಗಿನ ಬಡ್ಡಿ ಸಹ ಆಗುವ ಮೊಬಲಗಿಗೆ ಪ್ರತಿವಾದಿ ಲಕ್ಕುವಳ್ಳಿ ತಾಲ್ಲೂಕು ಅತ್ತಿಗುಂಡಿ ಯಲ್ಲಿ ಯಿರುವ ಹಾಸುಮೀಯನ ಬಾಬತು ಜಿಂದಿಗಿ ಜಪ್ತೀ ಆದ್ದರ ಪೈಕಿ ಸ್ಥಿರಜಿಂದಿಗಿ ಲಕ್ಕುವಳ್ಳಿ ತಾಲ್ಲೂಕಿನಲ್ಲಿ ಯಿರುವ ಪ್ರಕಾರ ಫೆಸಲ್ ಖೂಂದುತೋಟ ೨ಕ್ಕೆ ೧೨೪ ರೂಪಾಯಿ ಮತ್ತು ಪ್ರತಿವಾದಿ ವಾಸವಾಗಿರುವ ಹುಲ್ಲು ಮನೆ ೧ಕ್ಕೆ ಅಂದಾಜ್ ೨೩ ರೂಪಾಯಿ ಅಂತು ೧೪೭ ರೂಪಾಯಿಗಳ ಸ್ವತ್ತು ಪೈಕಿ ಮನೆ ಮೇ ತಾರೀಕ್ ೨೦ ರಲ್ಲು ತೋಟಗಳು ತಾ|| ೨೩ ರಲ್ಲು ಹರಾಜ್ ಆಗುವದರಿಂದ ಖಾಯಿಷ್ವುಳ್ಳವರು ಆಸ್ಥಳಕ್ಕೆ ಹಾಜರಾಗಿ ದರಖಾಸ್ತು ಮಾಡಬಹುದು.

(Signed) T. VENCATASOOBIAH,
Asst. Supt.

HASSAN DISTRICT.

Notice inviting claimants to a coffee jungle applied for by one Siddaveeriah of Nadahully village, and situated in the Munzerabod Talook, to appear & prefer their claims before the 1st. class Native Assistant Superintendent, Hassan District, within the 5th June 1867.

ಇಸ್ತಿಹಾರ್ ನಾಮಾ.

ಹಾಸನ ಡಿಸ್ಟ್ರಿಕ್ಟು ಡಿಪ್ಯುಟಿ ಸೂಪರಿಂಟೆಂಡೆಂಟ್ ಹುಜೂರಿಂದಾ.

ಮಂಜರಾಬಾದ್ ತಾಲ್ಲೂಕು ಕನಟಾ ಹೋಬಳಿ ನಡಹಳ್ಳಿ ಗ್ರಾಮದ ಪಾತದಹಳ್ಳಿ ಮಠಕ್ಕೆ ಶೇರಿ ಇರುವ ಮಠದರಹಳ್ಳಿ ಮಠದ ಹಿತ್ತಲ್ ಸುಮಾರು ೧|| ಯಕರೆ ವುಳ್ಳದ್ದು. ಯಿದರ ಚಕ್ಕುಬಂದಿ.

೧ ಪೂರ್ವಕ್ಕೆ ಜೊಮ್ಮದ ದಿಬ್ಬಾ ಯನ್ನುವ ದಿಣ್ಣೆ ಮತ್ತು ಮಠದ ಅಗಳು, ಮತ್ತು ಮಠದ ವಳಕ್ಕೆ ಬರುವ ದನಾ ತಿರುಗುವ ಕಾಲು ವೋಣಿ ಸಹಾ.

೧ ಪಶ್ಚಿಮಕ್ಕೆ ಮಠದರ ಹಳ್ಳಿ ಮಠದ ದಿಣ್ಣೆ ಪತ್ತು ಹಳೆ ಮಠದ ಅಗಳೂ.

೧ ವುತ್ತರಕ್ಕೆ ಗುರ್ಜಿನ ಹಳ್ಳಿಯಿಂದ ಮಠಕ್ಕೆ ಬರುವ ದಾರಿ ಮತ್ತು ಹೊಸ ಹಗಳು.

೧ ದಕ್ಷಿಣಕ್ಕೆ ಸದರಿ ಮಠದರ ಹಳ್ಳಿ ಮಕ್ಕಿ ಗದ್ದೆಗಳು ಈ ಜಮೀನ್ ಕಾಫಿ ಸಾಗುವಳಿಗೆ ಕೊಡಿಸ ಬೇಕೆಂದು ಮೆಲ್ಕಂಡ ನಡೀಹಳ್ಳಿ ಗ್ರಾಮದ ಮಠದರ ಹಳ್ಳಿ ಮಠದ ಶಿದ್ದವೀರ್ಯೆಯ್ಯನೆಂಬವನು ದರಖಾಸ್ತು ಕೊಟ್ಟು ಇದ್ದಾನಾಗಿ ಇದಕ್ಕೆ ಬಾಧ್ಯ ಪಟ್ಟು ಇರುವಂಥಾ ಸರ್ವರಿಗೂ ಇದರಿಂದ ಪ್ರಸಿದ್ಧ ಪಡಿಸುವದೇನಂದರೆ.

ಮೇಲ್ಕಂಡ ಜಾಗಾಕ್ಕೆ ಬಾಧ್ಯತೆಯುಳ್ಳವರಾಗಲಿ ಅಥವಾ ಅದನ್ನ ದರಖಾಸ್ತುದಾರ್ರಿಗೆ ಕೊಡುವ ವಿಷಯದಲ್ಲಿ ಅಕ್ಷೇಪಣೆಯುಳ್ಳವರಾಗಲಿ ಈ ಲಾಗಾಯತ್ ಜೂನ್ ತಾರೀಖು ೫ರ ವಳಗಾಗಿ ಫಸ್ಟ್ ಕ್ಲಾಸ್ ನೇಟಿವ ಅಸಿಸ್ಟೆಂಟ ಸೂಪರಿಂಟೆಂಡೆಂಟರವರ ಮುಂದೆ ಅಂಥಾ ಸಂಗತಿಯನ್ನ ಕುರಿತು ತಿಳಿಸತಕ್ಕದ್ದಿಧೆ.

ಬತಾರೀಖು ೨೬ನೇ ಮಾಹೆ ಎಪ್ರೈಲ್ ಸನ್ ೧೮೬೭ನೇ
ಇಸವಿ ಮೊಕ್ಕಾಂ ಹಾಸನ.

Notice inviting claimants to a coffee jungle applied for by one Soobagowda, and situated in the Munzerabad Talook, to appear and prefer their claims before the 1st class Native Assistant Superintendent, Hassan District, within the 5th June 1867.

ಇಸ್ತಿಹಾರ್.

ಹಾಸನ ಡಿಸ್ಟ್ರಿಕ್ಟು ಡಿಪ್ಯುಟಿ ಸೂಪರಿಂಟೆಂಡೆಂಟ್ ಹಜೂರಿಂದ

ಮಂಜರಾಬಾದ್ ತಾಲ್ಲೂಕು ಮೂಡಗೆರೆ ಹೋಬಳಿ ಕುನ್ನಹಳ್ಳಿ ಗ್ರಾಮಕ್ಕೆ ಶೇರಿದ ಕೊರಲ್‌ಗತ್ತಿ ವಡೋಯೆಂಬ ಪ್ರದೇಶದ ಚಕ್ಕುಬಂದಿ ವಂದು ಯಕ್ರೆವುಳ್ಳದ್ದು.

೧. ಪೂರ್ವಕ್ಕೆ ಈ ಗ್ರಾಮಕ್ಕೆ ಶೇರಿದ ಕಲ್ಲುಮರಟಿ ಈಚಲು ದಿಣ್ಣೆ.

೧. ಪಶ್ಚಿಮಕ್ಕೆ ಯಿದೇ ಕುಂಸಹಳ್ಳಿ ಗ್ರಾಮಕ್ಕೆ ಶೇರಿದ ಅನಾದಿ ಬಂಜರ್ ತೊರಟಿಗದ್ದೆ ಯೆಂಬ ತರೀ ಜಮೀನ್.

೧. ವುತ್ತರಕ್ಕೆ ಈ ಗ್ರಾಮಕ್ಕೆ ಶೇರಿದ ಈಚಲು ದಿಣ್ಣೆ.

೧. ದಕ್ಷಿಣಕ್ಕೆ ಯಿದೇ ಗ್ರಾಮಕ್ಕೆ ಶೇರಿದ ದನ ಮೇಯುವ ದಿಣ್ಣೆ.

ಈ ಜಮೀನ್ ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ಮೇಲ್ಕಂಡ ಮೂಡಗೆರೆ ಹೋಬಳಿ ಕಡುರಳ್ಳಿ ಗ್ರಾಮದ ಸುಬ್ಬೇಗವುಡನೆಂಬವನು ದರಖಾಸ್ತು ಕೊಟ್ಟು ಯಿದ್ದಾನಾಗಿ ಯಿದಕ್ಕೆ ಬಾಧ್ಯ ಪಟ್ಟು ಯಿರುವಂಥಾ ಸರ್ವರಿಗೂ ಯಿದರಿಂದ ಪ್ರಸಿದ್ಧ ಪಡಿಸುವದೇನಂದರೆ.

ಮೇಲ್ಕಂಡ ಜಾಗಾಕ್ಕೆ ಬಾಧ್ಯತೆಯುಳ್ಳವರಾಗಲಿ ಅಥವಾ ಅದನ್ನ ದರಖಾಸ್ತುದಾರಗೆ ಕೊಡುವ ವಿಷಯದಲ್ಲಿ ಆಕ್ಷೇಪಣೆಯುಳ್ಳವರಾಗಲಿ ಈ ಲಾಗಾಯಿತು ಜೂನ್ ತಾರೀಖು ೧೦ರ ವಳಗಾಗಿ ಫಸ್ಟ್ ಕ್ಲಾಸ್ ನೇಟಿವ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರ ಮುಂದೆ ಅಂಥಾ ಸಂಗತಿಯನ್ನ ಕುರಿತು ತಿಳಿಸತಕ್ಕದ್ದಿದೆ

ತಾರೀಖು ೨೬ನೇ ಮಾಹೆ ಯೇಪ್ರಿಲ್ ಸನ್ ೧೮೬೭ನೇ ಇಸವಿ ಮೊಕ್ಕಾಂ ಹಾಸನ.

Notice inviting claimants to two coffee jungles applied for by Pootagowda son of Nunjagowda, and Ahmed khan, respectively, and situated in the Munzerabad Talook, to appear and prefer their claims before the 1st class Native Assistant Superintendent Hassan District within the 10th June 1867.

ಹಾಸನ ಡಿಸ್ಟ್ರಿಕ್ಟು ಡಿಪ್ಯುಟಿ ಸೂಪರಿಂಟೆಂಡೆಂಟ್ ಹುಜೂರಿಂದಾ.

ಮಂಜಿರಾಬಾದು ತಾಲ್ಲೂಕು ಯಸಳೂರು ಹೋಬಳಿ ಬಾಳೆಕೆರೆ ಗ್ರಾಮದ ಮನೇವತ್ತಿನ ಹಿತ್ತಲ್.

ತಾಕು ೧ಕ್ಕೆ ೧ ಚಿಲ್ರ ಯೆಕರೇ ಜಾಗಾ ಚಕ್ಕು ಬಂದಿ.

೧ ಪೂರ್ವಕ್ಕೆ ಮದಾನಗುಂಡಿ ಯೆಂತ ಹೆಸರು ಕರಿಯುವ ಹನಾಲು ಅಂದರೆ ಕ್ಯಾದಿಗೆ ಮರಾ ವಗೈರೆ ಬೆಳದು ಯಿರುವ ಸ್ಥಳದಲ್ಲಿ ಹುಟ್ಟಿ ಯಿರುವದಕ್ಕೆ ನೀರು ಅಗಸರಕಟ್ಟೆ ಯೆಂಬ ಹಳ್ಳಕ್ಕೆ ಬೀಳುವ ಮಧ್ಯೆ ಯಿರುವ ನೀರು ಕಾಲವೆ.

೧ ಪಶ್ಚಿಮಕ್ಕೆ ಈ ದರಖಾಸ್ತುದಾರನ ಮನೆಯಿಂದ ದನಗಳು ಕಾಡಿಗೆ ಮೆಯ್ಯುವದಕ್ಕೆ ಹೋಗುವ ಬಗ್ಯೆ ತಿರಗುವ ವೋಣಿ.

೧ ವುತ್ತರಕ್ಕೆ ಈ ಹಿತ್ತಲ್ ಬಂದೋಬಸ್ತಿಗೋಸ್ಕರ ಈ ದರಖಾಸ್ತುದಾರ ಹೋದ ವರುಷ ತೆಗದು ಯಿರುವ ಹೊಸ ಅಗಳು.

೧ ದಕ್ಷಿಣಕ್ಕೆ ಡಿಟ್ಟೋ.

ತಾಕು ೧ಕ್ಕೆ ೧ ಚಿಲವಾರ್ ಯೆಕರೇ ವುಳ್ಳದ್ದು ಚಕ್ಕು ಬಂದಿ

೧ ಪೂರ್ವಕ್ಕೆ ಈ ದರಖಾಸ್ತುದಾರನ ಮನೇ ಯಿಂದ ದನಗಳು ಮೆಯ್ಯುವ ಬಗ್ಯೆ ಕಾಡಿಗೆ ಹೋಗುವ ವೋಣಿ.

೧ ಪಶ್ಚಿಮಕ್ಕೆ ಈ ಹಿತಲ್ ಬಂದೋಬಸ್ತಿಗೋಸ್ಕರ ಈ ದರಖಾಸ್ತುದಾರ ಹೋದ ವರುಷ ತೆಗದು ಯಿರತಕ್ಕ ಹೊಸ ಅಗಳು

೧ ವುತ್ತರಕ್ಕೆ ಡಿಟ್ಟೋ ಪ್ರಕಾರ.

೧ ದಕ್ಷಿಣಕ್ಕೆ ಡಿಟ್ಟೋ

ಈ ಜಮೀನ್ ಕಾಫಿ ಸಾಗುವಳಿಗೆ ಕೊಡಿಸ ಬೇಕೆಂದು ಸದರಿ ಬಾಳೇಕೆರೆ ಗ್ರಾಮದ ನಂಜೇಗೌಡನ ಮಗ ಪುಟ್ಟೇಗೌಡನು ದರಖಾಸ್ತು ಕೊಟ್ಟು ಯಿದ್ದಾನಾಗಿ ಯಿದಕ್ಕೆ ಬಾಧ್ಯಪಟ್ಟು ಯಿರುವಂಥಾ ಸರ್ವರಿಗೂ ಯಿದರಿಂದ ಪ್ರಸಿದ್ಧ ಪಡಿಸುವದೇನೆಂದರೆ.

ಮೇಲ್ಕಂಡ ಜಾಗಾಕ್ಕೆ ಬಾಧ್ಯತೆಯುಳ್ಳವರಾಗಲಿ, ಅಥವಾ ಅದನ್ನ ದರಖಾಸ್ತುದಾರಗೆ ಕೊಡುವ ವಿಷಯದಲ್ಲಿ ಆಕ್ಷೇಪಣೆಯುಳ್ಳವರಾಗಲಿ ಈ ಲಾಗಾಯಿತು ಜೂನ್ ತಾರೀಖು ೧೦ರ ವಳಗಾಗಿ ಅಂಥಾ ಸಂಗತಿಯನ್ನ ಕುರಿತು ಫಸ್ಟ್ ಕ್ಲಾಸ್ ನೇಟಿವ ಅಸಿಸೆಂಟ್ ಸೂಪರಿಂಟೆಂಡೆಂಟರವರ ಮುಂದೆ ತಿಳಿಸತಕ್ಕದ್ದಿದೆ.

ನೋಟಿಸ್.

ಹಾಸನ ಡಿಸ್ಟ್ರಿಕ್ಟು ಡಿಪ್ಯುಟಿ ಸೂ॥ ಹಜೂರಿಂದಾ.

ಮಂಜರಾಬಾದು ತಾಲ್ಲೂಕು ಮಂಜರಾಬಾದು ಹೋಬಳಿ ದೋಣಿಗಾಲಿ ಗ್ರಾಮದಲ್ಲಿ ಇರುವ ಮನೆ ಸಮೀಪದಲ್ಲಿ ಇರುವ ಹಿತ್ತಲ್

೧ ಯೆಕರೆ ಜಾಗಾ ಚಕ್ಕು ಬಂದಿ

೧ ಪೂರ್ವಕ್ಕೆ ಗ್ರಾಮದ ದನಗಳು ಈ ಗ್ರಾಮದಿಂದ ಆರು ಕಟ್ಟುವದಕ್ಕೆ ಹೋಗುವ ದಾರಿ

೧ ಪಶ್ಚಿಮಕ್ಕೆ ಈ ದರಖಾಸ್ತುದಾರನ ಅಂಣ ಹಸನ್‌ಖಾನನ ಮನೆ.

೧ ವುತ್ತರಕ್ಕೆ ಈ ದರಖಾಸ್ತುದಾರನ ತಮ್ಮ ಬಿರಾಂಸಾಬಿ ಹಳೆ ಮನೆ

೧ ದಕ್ಷಿಣಕ್ಕೆ ಮಂಗಲೂರಿಗೆ ಹೋಗತಕ್ಕ ಮಾರ್ಗ ಈ ಜಮೀನ್ ಕಾಫಿ ಸಾಗುವಳಿಗೆ ಕೊಡಿಸಬೇಕೆಂದು ಸದರಿ ದೋಣಿಗಾಲ ಗ್ರಾಮದಲ್ಲಿ ಇರುವ ಅಹಮ್ದ ಖಾನನೆಂಬವ ದರಖಾಸ್ತು ಕೊಟ್ಟು ಇದ್ದಾನಾಗಿ ಇದಕ್ಕೆ ಬಾಧ್ಯ ಪಟ್ಟು ಇರುವಂಥಾ ಸರ್ವರಿಗು ಇದರಿಂದ ಪ್ರಸಿದ್ಧ ಪಡಿಸುವದೇನಂದರೆ.

ಮೇಲ್ಕಂಡ ಜಾಗಾಕ್ಕೆ ಬಾಧ್ಯತೆಯುಳ್ಳವರಾಗಲಿ ಅಥವಾ ಅದನ್ನ ದರಖಾಸ್ತುದಾರಗೆ ಕೊಡುವ ವಿಷಯದಲ್ಲಿ ಆಕ್ಷೇಪಣೆಯುಳ್ಳವರಾಗಲಿ ಈ ಲಾಗಾಯಿತು ಜೂನ್ ತಾರೀಕು ೧೦ರ ವಳಗಾಗಿ ಫಷ್ಟ್ ಕ್ಲಾಸ್ ನೆ॥ ಅ॥ ಸೂಪರಿಂಟೆಂಡೆಂಟರವರ ಮುಂದೆ ಅಂಥಾ ಸಂಗತಿಯನ್ನು ಕುರಿತು ತಿಳಸತಕ್ಕದಿದೆ.

ಬತಾರೀಕು ೩೦ನೇ ಮಾಹೆ ಯುಪ್ರಿಲ್ ಸನ್ ೧೮೬೭ನೇ ಯಿಸವಿ ಮೊಕ್ಕಾಂ ಹಾಸನ.

NOTICE.

Notice is hereby given, that on Monday, the 27th instant, at noon, five licenses for retailing arrack in the town of Hassan, from 1st June 1867 to 31st March 1868, will be sold by auction at the office of the 4th Class, Assistant Superintendent.

Terms of Sale.

The highest bidder shall be considered the purchaser; and on a shop being knocked down to him, he shall be required to deposit 15 per cent of the amount of the sale proceeds, the balance being payable within 3 months from the date of sale. In the event of the above conditions not being complied with, the deposit money shall be forfeited to Government, and the license re-sold at the risk of the defaulting purchaser.

Not more than two licenses shall be held by, or on account of, one person.

H. G. THOMSON,
Offg. Deputy Superintendent.

ನೋಟಿಸ್.

ಹಾಸನ ಡಿಸ್ಟ್ರಿಕ್ಟು ಅ ಡಿ ಸೂಪರಿಂಟೆಂಡೆಂಟ್ ಕೆಪರ್ಟ ಥಾಮಸ್ ಸಾಹೇಬರವರು.

ಪ್ರಭವಸಂವತ್ಸರದ ವೈಶಾಖ ಶುದ್ಧ॥ ಲ್ಲೂ ಯಿದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುದೇನಂದರೆ.

ಹಾಸನದ ಕಸಬಾದಲ್ಲಿ ಸನ್ ೧೮೬೭ನೇ ಇಸವಿ ಜೂನ್ ಗುತ್ತ

ಲಾಗಾಯಿತು ೬೮ನೇ ಇಸವಿ ಮಾರ್ಚಿ ತಾರೀಖು ೩೧ರ ವರೆಗೆ ಷರಾಬರಿಟೆಲ್ ಐದು ಲೈಸೆನ್ಸ್‌ಗಳೂ ಈ ತಿಂಗಳು ೨೩ನೇ ತಾರೀಖು ಸೋಮವಾರ ಮಧ್ಯಾನ್ಹ ೧೨ ಘಂಟೆಗೆ ಫೋರ್ತ್‌ಕ್ಲಾಸ್ ನೇಟಿವ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರ ಮುಂದೆ ಹರಾಜು ಹಾಕಲ್ಪಡುತ್ತೆ.

ಹರಾಜು ನಿಬಂಧನೆ.

ಹರಾಜಿನಲ್ಲಿ ಛಡ ದರಖಾಸ್ತುದಾರನ ಕ್ರಯಕ್ಕೆ ತೆಗದುಕೊಂಡವನೆಂದು ಆಲೋಚಿಸಲ್ಪಡುತ್ತೆ. ಪಂದು ದುರ್ಖಾ ಹರಾಜು ಆಖ್ಯೆರಾದ ಕೂಡ್ಲೆ ಹರಾಜಿನಲ್ಲಿ ಪಡದವನು ಹರಾಜು ಮೊಬಲಗ್ಗೆ ಶೇಕಡಾ ೧೫ ರೂಪಾಯಿನ ಪ್ರಕಾರ ಹರಾಜು ಮೊಬಲಗ್ಗೆ ಠೇವಣಿ ಯಿಡಬೇಕು. ಅಲ್ಲದೆ ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು ಮೂರು ತಿಂಗಳವಳಗೆ ಕೊಡಬೇಕು ಸದರೀ ನಿಬಂಧನೆಗೆ ತಪ್ಪಿದಲ್ಲಿ ಠೇವಣೀ ಯಿಟ್ಟ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೇ ಸದರೀ ಲೈಸೆನ್ಸ್ ಪುನಹಾ ಹರಾಜು ಹಾಕಲ್ಪಡುತ್ತೆ. ಅದರಲ್ಲಿ ನುಕಸಾನ್ ಸಂಭವಿಸಿದ್ದಾದರೆ ಅದಕ್ಕೆ ಷುರು ಹರಾಜಿನಲ್ಲಿ ತೆಗದುಕೊಂಡವನೆ ಗುರಿ ಮಾಡಲ್ಪಡುತ್ತಾನೆ.

ಒಬ್ಬ ಮನುಷ್ಯ ಯೆರಡು ಲೈಸೆನ್ಸುಗಿಂತಾ ಹೆಚ್ಚಾಗಿ ಪಡೆಯ ಕೂಡದು.

ಬತಾರೀಖು ೯ನೇ ಮಾಹೆ ಮೇ ಸನ್ ೧೮೬೭ನೇ ಇಸವಿ ದರಜಾಗ ಹಾಸನ.

P. KRISTNA ROW,
For Dy. Supt.

COORG.

Notice regarding the sale of immovable property in satisfaction of a certain decree, at Mercara, on the 8th June 1867.

ಕೊಡಗು ಮಡಿಕೇರಿ ಮಹದೇವಪ್ಪೇಟೆ ಸುಭೇದಾರ್ ಕೋರ್ಟನಿಂದಾ.

ಈ ಕೋರ್ಟು ವಾದಿ ಫಾರಿಸ್ ಸಾಫರ್ ಜಿಸೇಟ್ಸ್‌ಗೆ ೧೮೬೬ನೇ ಇಸವಿ ಅರಿಜಿನಲ್ ನಂಬರ್ ೨೨೩ರ ಫೈಸಲ್ ಪ್ರಕಾರ ಪ್ರತಿವಾದಿ ಗಾರೆ ಕಾವೇರನಿಂದ ಸಲ್ಲತಕ್ಕ ೧೬೦—೬—೩ ಫೈಗೆ ಪ್ರತಿವಾದಿ ಬಾಬತು ಜಫ್ತಾಗಲ್‌ಪಟ್ಟಿರುವ ಈ ಪ್ಯಾಟೆಲಿರುವ ಸುಮಾರು ೧೬೫ ರೂಪಾಯಿ ಅಂದಾಜಿನ ಹಂಚಿನ ಮನೆ ೧ನ್ನು ಬರುವ ಜೂನ್ ತಾರೀಖು ೮ನೇ ಸ್ಥಿರವಾರ ಹಗಲು ೧೦ ಘಂಟೆಗೆ ಈ ಕೋರ್ಟಿನ ಮುಂದೆ ಛಡ ದರಖಾಸ್ತು ದಾರ್ರಿಗೆ ಹರಾಜ್ ಹಾಕಲ್ಪಡುತ್ತೆ ಅಪೇಕ್ಷೆ ಇರುವಂಥಾವರು ಹಾಜರಾಗಿ ತೆ ಕೊಳ್ಳ ಬಹುದು.

ಬತಾರೀಖು ೧೬ನೇ ಎಪ್ರೆಲ್ ಸನ್ ೧೮೬೭.

Notice regarding the sale of immovable property in satisfaction of a certain decree, at Mercara, on the 8th June 1867.

ಕೊಡಗು ಮಡಿಕೇರಿ ಮಹದೇವ ಪ್ಯಾಟೆ ಸುಭೇದಾರ್ ಕೋರ್ಟನಿಂದಾ.

ವಾದಿ ರಾಮಶೆಟ್ಟಿ ನಂಜಪ್ಪನಿಗೆ ಪ್ರತಿವಾದಿ ಪಕ್ಕಾಲಿ ವೆಂಕಟಸಾಮಿ ಇಂದ ಈ ಕೋರ್ಟ್ ಸನ್ ೧೮೬೭ನೇ ಅರಿಜಿನಲ್ ನಂಬರ್ ೧೫೩ರ ಫೈಸಲ್ ಪ್ರಕಾರ ಸಲ್ಲತಕ್ಕ ೧೫೭—೧೪—೭ಫೈಗೆ ಪ್ರತಿವಾದಿ ಬಾಬತು ಜಫ್ತಾಗಲ್ಪಟ್ಟಿರುವ ೨ ಎಕರ್ ಸ್ಥಳದ ಕಾಫಿ ತೋಟ ಮಡಿಕೇರೆನಾಡಿನಲ್ಲಿ ಇರುವದು ೧॥ ಯಕರ್ ಸ್ಥಳದಲ್ಲಿರುವ ಮನೆ ಹಿತ್ತಲೂ ಸುಮಾರು ೧೨೦ ರೂಪಾಯಿ ಅಂದಾಜಿನ ಸ್ಥಿತಿ ಜಫ್ತಾಗಿ ಇರುವದರನ್ನ ಬರುವ ಜೂನ್ ತಾರೀಖು ೮ನೇ ಸ್ಥಿರವಾರ ದಿವಸ ಹಗಲು ೧೦ ಘಂಟೆಗೆ ಈ ಕೋರ್ಟಿನ ಮುಂದೆ ಛಡ್ ದರಖಾಸ್ತುದಾರ್ರಿಗೆ ಹರಾಜಾಕಲ್ಪಡುತ್ತೆ ಅಪೇಕ್ಷೆ ಇರುವಂಥಾವರು ಆಯಾ ಕಾಲಕ್ಕೆ ಹಾಜರಾಗಿ ತೆಗದು ಕೊಳ್ಳ ಬಹುದು.

ಬತಾರೀಖು ೧೬ನೇ ಎಪ್ರೆಲ್ ಸನ್ ೧೮೬೭.

Notice regarding the sale of movable and immovable property in satisfaction of a certain decree, at Veerajender Pett, on the 5th June 1867.

ಕೊಡಗು ಪೇಶದ ದರಿಯಾಪ್ತು ಕಚೇರಿ ಕೋರ್ಟನಿಂದ

ಸನ್ ೧೮೬೫ನೇ ಇಸವಿ ಬಾಬತು ಅರ್ಜಿನಾಲ್ ನಂಬರ್—೩೬.

ಸದರಿ ನಂಬರ್ ವಾದಿ ಮೈಸೂರು ಕುಂಚಿಗರ ಬೊಂಮೈಯ್ಯಗೆ ಸಲ್ಲತಕ್ಕ ಡಿಕ್ರಿ ಮೊಬಲಗಿಗೆ ಪ್ರತಿವಾದೀರು ವೀರರಾಜೇಂದ್ರಪ್ಯಾಟೆಯಲ್ಲಿ ಇದ್ದ ರಜಪುತ್ರರ ೧ನೇ ಗಜರಾಜು ೨ನೇ ರುಕ್ಮಬಾಯಿ ಈ ವೆಂದ್ಯರ ಬಾಬತು ಜಪ್ತಾಗಲ್ಪಟ್ಟ ವೀರರಾಜೇಂದ್ರಪ್ಯಾಟೆ ಹೊಸ ರೋಡಿನ ಬಳಿ ಇರುವ ೫ ಬಟ್ಟೆ ಹೊಲವರಿ ಸ್ಥಳದಲ್ಲು ಇರತಕ್ಕ ೨ ಮನೆ ದಳ ಮತ್ತು ಖಾಲಿ ಜಾಗ ಸಹ ೩೦೦ ರೂಪಾಯಿ ಅಂದಾಜಿನ ಸ್ಥಿತಿಯನ್ನು ಬರುವ ಜೂನ್ ತಾರೀಖು ೫ನೇ ದಿನ ಹಗಲು ೧೨ ಗಂಟೆಗೆ ವೀರರಾಜೇಂದ್ರಪ್ಯಾಟೆ ಕಚೇರಿ ರೂಬರು ನಗದ್ ಹಣಕ್ಕೆ ಛಡ್ ದರಖಾಸ್ತುದಾರ್ರಿಗೆ ಹರಾಜಾಗಲ್ಪಡುತ್ತೆ. ಅಪೇಕ್ಷೆವುಳ್ಳವರು ತೆಗದುಕೊಳ್ಳ ಬಹುದು.

ಬತಾರೀಖು ೨ನೇ ಯೇಪ್ರೆಲ್ ಸನ್ ೧೮೬೭ನೇ ಇಸವಿಯಲ್ಲು ದರಜಾಗ ಮಡಿಕೇರಿ.

(ದ) ಅ. ಮೊ. ಅಯ್ಯಪ್ಪ

Notice regarding the sale of immovable property in satisfaction of a certain decree, at Coorg, on the 28th May 1967.

ಕೊಡಗು ಸೂಪರಿಂಟೆಂಡೆಂಟ್ ಕೋರ್ಟು.

ಸನ್ ೧೮೬೬ನೇ ಇಸವಿ ಅರಿಜಿನಲ್ ನಂ ೩.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ.

ವಾದಿ.	ಪ್ರತಿವಾದಿ.
ಮಹದೇವಪ್ಯಾಟೆ ದೇವಾಂಗದ ರಾಮಶೆಟ್ಟಿ ನಂಜಪ್ಪ.	ಮಡಿಕೇರಿಯಲ್ಲಿರುವ ಬ್ರಾಂಡ್ ರಾಮೈಯ್ಯಂಗಾರಿ.

ಈ ಮೊಕದ್ದಮಾ ಡಿಕ್ರಿಜಾರಿ ವುದ್ದಿಶ್ಯವಾಗಿ ಪ್ರತಿವಾದಿ ಬಾಬತು ಮಡಿಕೇರಿಯಿಂದ ವೀರರಾಜೇಂದ್ರ ಪ್ಯಾಟೆಗೆ ಹೋಗುವ ಬಳಿ ಮಡಿಕೇರಿ ನಾಡಿನಲ್ಲಿರತಕ್ಕ ೩೩—೧೫—೪ ರೂಪಾಯಿ ಜೇರೀಜಿನ ೨ ಯೆಕರಾ ೩೮ ಸೆಂಟ್ ವುಳ್ಳ ಕಾಫೀ ತೋಟವನ್ನ ಬರುವ ಮೇ ತಿಂಗಳು ೨೮ನೇ ತಾರೀಖಿನಲ್ಲಿ ಮಡಿಕೇರೀ ಪೋಟಾಪೋಟಿಯಿಂದ ಹರಾಜು ಹಾಕಲ್ಪಡುವದು ಅಂದಾಜು ಮೊಬಲಗು ೬೯೦೦ ರೂಪಾಯಿ ದರಖಾಸ್ತಿನಲ್ಲಿ ಪಡಕೊಂಡವರು ದರಖಾಸ್ತು ಮೊಬಲಗಿನಲ್ಲಿ ಶೇಕಡಾ ೧೫ರ ಮೇರೆ ಠೇವಣೀ ಇಟ್ಟು ಬಾಕಿ ಐವಜು ೧೫ ದಿನದೊಳಗೆ ಹಾಜರ್ಮಾಡ ಬಹುದು. ಸದರಿ ಸ್ಥಿತಿಯಲ್ಲಿ ಪ್ರತಿವಾದಿ

ಗೆ ಇರುವ ಹಕ್ಕು ಬಾಧ್ಯತೆ ಸಂಬಂಧಕ್ಕೆ ಮಾತ್ರ ಸದರೀ ವಿಕ್ರಯ ವ್ಯಾಪಿಸುತ್ತದೆ.

Notice regarding the sale of immovable property in satisfaction of a certain decree, at Coorg, on the 27th May 1867.

ಕೊಡಗು ದರ್ಯಾಫ್ತಿ ಕಚೇರಿ ಕೋರ್ಟಿನಿಂದ
ಸರ್ ೧೮೬೭ನೇ ಇಸವಿ ಬಾಬತು ಅರಿಜಿನಲ್ ನಂಬರ್ ೧೦೬
ಸರ್ವೇ ಜನರಿಗೆ ಪ್ರಕಟಿಸುವದೇನಂದರೆ,

ಮೇಲ್ಕಂಡ ನಂಬರು ವಾದಿ ಮಹದೇವ ಪ್ಯಾಟೆ ರಾಮಶೆಟ್ಟಿ ನಂಜಪ್ಪಗೆ ಪ್ರತಿವಾದಿ ಸದರಿ ಪ್ಯಾಟೆ ಬಟ್ಟಿಕಲ್ಲಿಗೆರ್ ಸುಟಿಅಂಮದ್ ಸಾಬಿಯಿಂದ ಸಲ್ಲತಕ್ಕ ಡಿಕ್ರಿ ಮೊಬಲಿಗಾಗಿ ಜಪ್ತಾಗಲ್ಪಟ್ಟ ಇವನ ಬಾಬತು ಮಡಿಕೆರೆನಾಡು ಸುಳಿಬಾಕದ ಬಳಿ ಇರುವ ಗಿರುವಿಸ್ಥಿತಿಯಾದ ೨೦೦೦ ರೂಪಾಯಿ ಅಂದಾಜಿನ ೧೫೦೦೦ ಕಾಫಿ ಗಿಡ ಮತ್ತು ಕಿತ್ತೆ ಗಿಡ ಬಾಳೆ ವಗೈರೆ ಇರತಕ್ಕ ೨೮ ಎಕರ್ ಸ್ಥಳದ ತೋಟ ಬರುವ ಮೇ ತಾರೀಖು ೨೭ನೇ ದಿನ ಹಗಲು ೧೨ ಗಂಟೆಗೆ ಈ ಕೋರ್ಟು ಮುಂದೆ ನಗದ್ ಹಣಕ್ಕೆ ಛಡ ದರಖಾಸ್ತುದಾರ್ರಿಗೆ ಹರಾಜ್ ಹಾಕಲ್ಪಡುತ್ತೆ ಅಪೇಕ್ಷೆ ಇರುವವರು ತೆಕ್ಕೊಳ್ಳಬಹುದು.

ಬತಾರೀಖು ೨೬ನೇ ಫೆಬ್ರವರಿ ಸರ್ ೧೮೬೭ನೇ ಇಸವಿ ದರ ಜಾಗಾ ಮಡಿಕೇರಿ.

Notice regarding the sale of movable and immovable property in satisfaction of a certain decree, at Coorg, on the 24th May 1867.

ಕೊಡಗು ದೇಶದ ಮಡಿಕೆರೆ ತಾಲ್ಲೂಕು ಕೋರ್ಟು
ಸರ್ ೧೮೬೭ನೇ ಇಸವಿ ಅಮಲ್‌ಜಾರಿ ನಂಬರು ೧೪

ವಾದಿ	ಪ್ರತಿವಾದಿ
ಮಡಿಕೆರೇಲಿರುವ ಮು॥ ಬುರ್ಹಾನ್ ಮುಲ್ಲಿ ಗುಮಾಸ್ತೆ ಹುಶೇರ್ ಸಾಬಿ.	ತಾಲ್ಲೂಕು ಮಾಣಿಯಲ್ಲಿ ಯಿರುವ ಮಿ॥ ಕರಿಯಣ್ಣನ ರಂಗೈಯ್ಯ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ,

ಈ ನಂಬರು ಫೈಸಲ್ ಜಾರಿ ಪ್ರದ್ದಿಕ್ಯ ಪ್ರತಿವಾದಿ ಬಾಬತು ತಾಟಕೆರೆ ಗ್ರಾಮ ತಾಳತಮನಿ ಪೇಟೇಲಿರುವ ೮॥ ಯಕರಾವುಳ್ಳ ಕಾಫಿ ತೋಟ, ಗಂಗಳ ಚಂಬು, ಯಿತ್ತಾಳೆ ಚಂಬು, ಮರದ ಮಂಚ, ವಗೈರೆ ೧೮೬೭ನೇ ಮೇ ತಾರೀಕ್ ೨೪ಕ್ಕೆ ಮಡಿಕೇರಿ ತಾಲ್ಲೂಕು ಕಚ್ಚೇರಿ ರೂಬರೂ ಪೋಟಾ ಪೋಟಿಯಿಂದ ಹರಾಜ್ ಹಾಕಲ್ಪಡುವದು. ಅಂದಾಜ್ ಮೊಬಲಗು ೨೦೩—೧೨—೦ ರೂಪಾಯಿ ದರಖಾಸ್ತಿನಲ್ಲಿ ಪಡಕೊಂಡವರು ದರಖಾಸ್ತು ಮೊಬಲಗು ಶೇಕಡಾ ೧೫ರ ಮೇರ್ಗೆ ಠೇವಣಿ ಯಿಟ್ಟು ಬಾಕಿ ಐವಜು ೨೪ ಘಂಟೆ ವಳಗಾಗಿ ಹಾಜರ್ಮಾಡಬೇಕು.

ಈ ಸೊತ್ತಿನ ಪ್ರತಿವಾದಿಗೆ ಯಿದರ ಹಕ್ಕಿಗೆ ಮಾತ್ರ ಸದರಿ ವಿಕ್ರಯವು ವ್ಯಾಪಿಸುತ್ತದೆ.

A Descriptive Roll of 3 prisoners who escaped from the Mercara Jail on the night of the 23rd April 1867.

ಸರ್ ೧೮೬೭ನೇ ಇಸವಿ ಯೇಪ್ರಿಲ್ ತಾರೀಖು ೨೩ನೇ ದಿವಸ ರಾತ್ರಿ ಜೈಲಿನಿಂದ ಫರಾರಿ ಆದ ಕೈದೀರ ಚಹರೆ.

ನಂಬರು.	ಹೆಸರು ತಂದೆ ಹೆಸರು.	ವರ್ಣ ಜಾತಿ ಕಸಬು.	ವುನ್ನತ.			ವಾಸಸ್ಥಳ.	ಮುಖ್ಯವಾದ ಗುರುತು ಆಕಾರ ಲೋಪ.	ಯಾರ ಮಾರ್ಫತು ಕಳುಹಿಸಲ್ಪಟ್ಟಿತೊ ಆ ವುದ್ಯೋಗಸ್ಥರ ಹೆಸರು.
			ವಯಸ್ಸು.	ಅಡಿ.	ಅಂಗುಲ.			
೧೯೩	ಅಪ್ಪಣ್ಣ ಈರಪ್ಪ.	ಯಣೆಕೆಂಪು ಕ್ಷಾತ್ರಿಜಾತಿ ಜಿರಾಯ್ತು.	೩೫	೫	೩	ಯೆಡೆನಾಕನಾಡು ತಾಲ್ಲೂಕು ಅಂಮತ್ತಿನಾಡು.	ಇವನ ಬಲದ ಭುಜದ ಮೇಲೆ ಹಸುರು ಹಚ್ಚೆ ಇಧೆ ಬಲದ ಕಾಲು ಮಿಣುಕಂಡದಲ್ಲಿ ಉದ್ದ ಅರ್ದ ಅಂಗುಲ ಚಟ್ಟು ದಪ್ಪ ಘಾಯ ವಿಧೆ ಮುಖದಲ್ಲಿ ಶಿಡಿಬಿನ ಕಲೆ ಇದೆ. ಇವನ ಯಡದ ಕೈ ಅಂಗೈಮೇಲೆ ಹಚ್ಚೆ ಇದೆ ಗಡ್ಡಾ ಮಿಸೆ ಬಂದು ಇಧೆ.	ಹಜೂರು.
೧೯೪	ಮಾಜಯಾನೆ ಅಪ್ಪಣ ಪುಟ್ಟೈಯ.	ಯಣೆಕೆಂಪು ಕ್ಷಾತ್ರಿಜಾತಿ ಜಿರಾಯ್ತು.	೨೫	೫	೩	ಸದರಿ	ಇವನ ಯೆದೆ ಗುಂಡಿಗೆ ಕೆಳಗೆ ಘಾಯ ವೆಂದು ಕಾಸಿನ ಅಗಲಕ್ಕೆ ಸ್ವಲ್ಪ ಹೆಚ್ಚಾಗಿದೆ. ಯಡಗಡೆ ಹೊಟ್ಟೇಮೇಲೆ ಬಂದು ರೂಪಾಯಿ ಅಗಲ ಘಾಯ ವಿಧೆ. ಯಡದ ಕಂಕಳ ಕೆಳಗೆ ಬಂದು ಅಂಗುಲ ಉದ್ದ ಅರ್ದ ಅಂಗುಲ ಅಗಲ ಘಾಯ ವಿಧೆ. ಗಡ್ಡಾ ಮಿಸೆ ಬಂದಿಧೆ ಮಟ್ಟ ತರದ ಆಳು.	ಸದರಿ
೧೯೮	ಅಂಣೈಯಾನೆ ಪೆಂಗಟ ಈರಪ್ಪ.	ಕೆಂಪುವರ್ಣ ಕ್ಷಾತ್ರಿ ಜಿರಾಯ್ತು.	೨೫	೫	೩	ಸದರಿ	ಇವನ ಬಲದ ಕೈ ಮೇಲೆ ಅಂಮ ಹಾಕಿದ ಘಾಯ ಮೂರು ಇದೆ ಯಡದ ತೋಳು ಮೇಲೆ ಯರಡು ಘಾಯ ವಿದೆ ಇವನ ಬೆನ್ನು ೧ ಅಡಿ ೬ ಅಂಗಲ ಅಗಲ ವಿದೆ ಮಟ್ಟತರ ಕೋಲು ಮುಖವಾಗಿಧೆ.	ಸದರಿ

In the Court for the relief of Insolvent Debtors.

Deputy Superintendent's Office, Bangalore District.

Whereas the undermentioned individuals have taken oath, or solemnly affirmed before me, that they are unable to meet their engagements, and have filed the required Schedules of assets and liabilities, and verified the same upon solemn affirmation, their persons and property are exempted from legal process, pending enquiry, and the final orders of this Court.

Notice is also hereby given, that the date set opposite to each insolvent's name is the day appointed for the meeting of his creditors the appointment of an official assignee, and the hearing of his petition of discharge.

The schedules of the insolvents are open for the inspection of the creditors.

Registration of claims against insolvents may be obtained by presenting an application to this Court on an eight anna stamp paper, containing a statement of the same, verified and signed by the applicant.

Creditors, living at a distance, may obtain registration by forwarding by post a statement of their claim written upon an eight anna stamp paper, and verified on oath or solemn affirmation before a Judicial Officer.

All creditors, intending to oppose an insolvent's discharge, must give notice thereof by a petition written on an eight anna stamp paper, containing the grounds of their opposition, and an enumeration of any witnesses they wish to be summoned: such notice must be filed in this Court at least three days before the day appointed for meeting, and a similar notice must be given by each creditor to his insolvent three clear days before the day of hearing.

ಇನ್ಸಾಲ್ವೆಂಟ್‍ಯಾನೆ ದಿವಾಳಿಯಾದ ಸಾಲಗಾರರ ರಕ್ಷಣಾರ್ಥವಾಗಿ ಆದ ಕೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು ಡಿಪ್ಯುಟಿ ಸೂಪರಿಂಟೆಂಡೆಂಟ್ ಕಚೇರಿ.

ಈ ಕೆಳಗೆ ನಮೂದು ಮಾಡಲ್ಪಟ್ಟ ಜನಗಳು ತಮ್ಮ ಸಾಲಗಳನ್ನು ತೀರಿಸುವದಕ್ಕೆ ಅಸಮರ್ಥರೆಂಬದಾಗಿ ನಂಮ ಮುಂದೆ ಪ್ರಮಾಣ ಮಾಡಿಯೂ ಯಾ ಸತ್ಯವಾಗಿ ಹೇಳಿ ತಂಮ ಜಿಂದಿಗಿ ಮತ್ತು ದೇಣೆಗಳನ್ನು ಪಟ್ಟೀ ಬರದು ಹಾಜರ್ಮಾಡಿ ಪ್ರಮಾಣ ಪೂರ್ವಕವಾಗಿ ಅದನ್ನು ದೃಢಪಡಿಸಿಯಿರುವದರಿಂದ ಈ ಕೋರ್ಟಿನಲ್ಲಿ ವಿಚಾರಣೆಯಾಗಿ ಆಖೈರ್ ಹುಕುಂ ಆಗುವ ಪರ್ಯಂತ ಅವರುಗಳು ಅವರುಗಳ ಸ್ವತ್ತು ಸಹ ದಾವಾ ನಡಿಸಲ್ಪಡುವದಕ್ಕೆ ವಿಷಯವಾಗಿರುವದಿಲ್ಲವು.

ಮತ್ತು ಯಿದರಿಂದ ತಿಳಿಸಲ್ಪಡುವದೇನಂದರೆ ಪ್ರತಿ ಯಿನ್ಸಾಲ್ವೆಂಟ ಹೆಸರಿಗೆ ಯೆದುರಾಗಿ ಬರದಿರುವ ತಾರೀಖು ಆ ಸಾಲಗಾರನ ಲೇಣೇದಾರು ಸಭೆ ಸೇರುವದಕ್ಕೂ, ಆಫಿಷಿಯಲ್ ಆಸೈನಿಯನ್ನು ನೇಮಕರರ್ ಮಾಡುವದಕ್ಕೂ, ಸಾಲವನ್ನು ತಪ್ಪಿಸ ಬೇಕೆಂದು ಬರದು ಕೊಂಡ ಅರ್ಜಿಯನ್ನು ವಿಚಾರಿಸುವ ಬಗ್ಯೆ ನಿಷ್ಕರ್ಷೆಯಾಗಿರುತ್ತೆ.

ದಿವಾಳೀ ಯಾದವರ ಪಟ್ಟಿಯನ್ನು ಲೇಣೇದಾರು ನೋಡ ಬಹುದು.

ದಿವಾಳಿಯಾದವರ ಮೇಲೆ ಯಿರುವ ದಾವಾಗಳನ್ನು ರಿಜಿಸ್ಟರ್ ಮಾಡಿಸುವ ಬಗ್ಯೆ ೮ ಆಣೆ ಛಾಪಾ ಕಾಗದದಲ್ಲಿ ದಾವೆಯ ತಪಸೀಲಿನಿಂ ಅರ್ಜಿ ಬರದು ಅರ್ಜಿದಾರ ಅದನ್ನು ದೃಢಪಡಿಸಿ ದಸ್ತಖತ್ತು ಮಾಡಿ ಈ ಕೋರ್ಟಿಗೆ ದಾಖಲ್ಮಾಡಿದರೆ ದಾವಾ ರಿಜಿಸ್ತರ್ ಆಗುವದು.

ದೂರದಲ್ಲಿ ವಾಸಾ ಮಾಡುವಂಥಾ ಲೇಣೇದಾರು ೮ ಆಣೆ ಛಾಪಾ ಕಾಗದದಲ್ಲಿ ತಮ್ಮ ದಾವೆಯ ತಪಸೀಲನ್ನು ಬರದು ಅದನ್ನು ವೊಬ್ಬ ಜುಡೀಷಲ್ ಅಧಿಕಾರಿಯ ರೂಬರೂ ಪ್ರಮಾಣಪೂರ್ವಕವಾಗಿ ದೃಢಪಡಿಸಿ ಟಪ್ಪಾಲ್ ಮೂಲಕ ರವಾನೆ ಮಾಡಿದಲ್ಲಿ ಅಂಥಾ ದಾವಾ ರಿಜಿಸ್ತರಾಗುವದು.

ದಿವಾಳಿ ಕೋರರ ಅಥವಾ ಇನ್ಸಾಲ್ವೆಂಟಿನ ಸಾಲವನ್ನು ತಪ್ಪಿಸುವ ವಿಷಯದಲ್ಲಿ ವಿರೋಧಿಸುವ ಇಷ್ಟವುಳ್ಳ ಯಲ್ಲಾ ಲೇಣೇದಾರು ೮ ಆಣೆಯ ಬಾಬತು ಛಾಪಾ ಕಾಗದದ ಮೇಲೆ ತಾವು ವಿರೋಧಿಸುವದಕ್ಕೆ ವುಂಟಾಗಿರುವ ಸಬಬುಗಳನ್ನು ಸಮ್ಮನ್ ಮಾಡಲ್ಪಡಬೇಕೆಂದು ತಾವು ಅಪೇಕ್ಷಿಸುವ ಯಿತರ ಸಾಕ್ಷಿಗಳನ್ನು ಸಹ ನಮೂದು ಮಾಡಿ ಅರ್ಜಿ ಬರದು ಸಾಲದ ಮೇರಿಗೆ ತಾವು ವಿರೋಧಿಸುವದನ್ನು ಕುರಿತು ನೋಟಿಸ ಕೊಡಬೇಕು. ಇಂಥಾ ನೋಟಿಸ ಸಭೆ ಸೇರಿಸುವದಕ್ಕೆ ನಿಯಮಿಸಲ್ಪಟ್ಟಿರುವ ದಿವಸಕ್ಕೆ ಅಥವಾ ಪಕ್ಷ ಮೂರು ದಿನಗಳ ಮುಂಚಿತವಾಗಿ ಈ ಕೋರ್ಟಿನಲ್ಲಿ ದಾಖಲಾಗಿರಬೇಕು. ಮತ್ತು ಪ್ರತಿ ಲೇಣೇದಾರನು ತನ್ನ ದಿವಾಳಿಖೋರ ಆಸಾಮಿಗೆ ಇದೇ ಪ್ರಕಾರ ನೋಟೀಸನ್ನು ವಿಚಾರಣೆ ಆಗುವದಕ್ಕೆ ನಿಯಮಿಸಲ್ಪಟ ದಿನಕ್ಕೆ ಪೂರಾ ಮೂರು ದಿನಗಳ ಮುಂಚಿತವಾಗಿ ಕೊಡಬೇಕು.

NAMES OF INSOLVENTS. ದಿವಾಳಿ ಖೋರರಗಳ ಹೆಸರುಗಳು.	Date of ad-Interim order. ರಕ್ಷಣೆಗಾಗಿ ಕೊಡಲ್ಪಟ್ಟ ತಾರೀಕ್.	Date appointed for the meeting of Creditors. ದೇಣೇದಾರು ಸಭೆ ಸೇರಿಸುವದಕ್ಕಾಗಿ ನೇಮಿಸಲ್ಪಟ್ಟ ತಾರೀಖು.
Rama Rao, Goomastah, Judicial Commr's. Office. ಜುಡಿಷಿಯಲ್ ಕಮ್ಮಿಷನರ್ ಆಫೀಸ್ ಗುಮಾಸ್ತಾ ರಾಮರಾವ್.	23d April 1867. ೨೩ನೇ ಏಪ್ರಿಲ್ ೧೮೬೭.	27th May 1867. ೨೭ನೇ ಮೇ ೧೮೬೭.
Ramacharry, Carpenter, and a resident of Bangalore. ಬೆಂಗಳೂರು ವಾಸಸ್ತನಾಗಿಯೂ ಬಡಗಿ ಕೆಲಸದವನಾಗಿಯೂ ಯಿರುವ ರಾಮಾಚಾರಿ.	24th April 1867. ೨೪ನೇ ಏಪ್ರಿಲ್ ೧೮೬೭.	27th May 1867. ೨೭ನೇ ಮೇ ೧೮೬೭.
Herkara Héraniappah of the Commr's. Office. ಕಮ್ಮಿಷನರ್ ಆಫೀಸ್ ಹರಕಾರ ಹಿರಾನಿಯಪ್ಪ.	10th May 1867. ೧೦ನೇ ಮೇ ೧೮೬೭.	10th June 1867. ೧೦ನೇ ಜೂನ್ ೧೮೬೭.
Kristuppah Hoscottah Shanbogue. ಹೊಸಕೋಟೆ ಶಾನುಭೋಗ ಕೃಷ್ಣಪ್ಪ.	11th May 1867. ೧೧ನೇ ಮೇ ೧೮೬೭.	10th June 1867. ೧೦ನೇ ಜೂನ್ ೧೮೬೭.
Abdool Rhymon, Baker in the Cantonment General Bazar. ಲಷ್ಕರ್ ಜನರಲ್ ಬಜಾರು ರೊಟ್ಟಿಕಾರೆ ಅಬ್ದುಲ್ ರೈಮನ್.	14th May 1867. ೧೪ನೇ ಮೇ ೧೮೬೭.	14th June 1867. ೧೪ನೇ ಜೂನ್ ೧೮೬೭.

Deputy Superintendent's Office,
Bangalore District, 15*th May* 1867.

(Signed) W. HILL,
Deputy Superintendent.

LOST.

Near St. Mark's Church, a Cameo Brooch set in thin English gold. Whoever may find the same and will bring it to the Superintendent of Police, will receive a reward of five Rupees.

Bangalore,
9*th May* 1867.

E. D. GOMPERTZ,
Supt. of Police.

ಹೋಗಲಾಡಿಸಿ ಕೊಳ್ಳಲ್ಪಟ್ಟದ್ದು.

ಸೆಂಟ್ ಮಾರಕ್ಸ್ ಗುಡಿ ಸಮೀಪದಲ್ಲಿ ಇಂಗ್ಲಿಷ್ ಭಂಗಾರದಲ್ಲಿ ಯಿಡಲ್ಪಟ್ಟ ಒಂದು ಕ್ಯಾಮಿಯೋ ಬ್ರೋಚ್ ಯೆಂಬುವದು ಕಳಕೊಳ್ಳಲ್ಪಟ್ಟಿತೂ, ಯಾರಾದರು ಅದರನ್ನು ತಂದು ಪೋಲಿಸ ಸೂಪರಿಂಟೆಂಡೆಂಟರವರ ಬಳಿಯ ಹಾಜರ್ಮಾಡಿದರೆ ಅವರಿಗೆ ೫ ರೂಪಾಯಿಗಳ ಯಿನಾಂ ಸಿಕ್ಕುವದು.

(Signed)

Bangalore,
9*th May* 1867.

E. D. GOMPERTZ,
Supt. of Police.

NOTICE.

A reward of Rupees 200 is offered for any information that may lead to the discovery of the perpetrators of a murder of a woman whose corpse, tied up in a mat, was found in a well situated in the village of Bommawarum, Davenhully Talook.

DY. SUPT.'S OFFICE, BANGALORE DIST. 30*th April* 1867.

W. HILL, *Offg. Dy. Supt.*

ನೋಟಿಸ.

ದೇವನಹಳ್ಳಿ ತಾಲ್ಲೂಕು ಬೊಂಮವಾರ ಗ್ರಾಮದಲ್ಲಿ ವೊಂದು ಭಾವಿ ಯೊಳಗೆ ಚಾಪೆಯೊಳಗೆ ಕಟ್ಟಲ್ಪಟ್ಟದ್ದ ವೊಬ್ಬ ಹೆಂಗಸು ಶ್ರವವನ್ನು ದೊರೆತಿರುವದ್ದರಿಂದ ಆ ಹೆಂಗಸನ್ನು ಕೊಂದಂತಾವರ ಪತ್ತೆ ಬಗ್ಯೆ ತಕ್ಕ ಸಮಾಚಾರವನ್ನು ಕೊಡುವಂತಾವರಿಗೆ ೨೦೦ ರೂಪಾಯಿಗಳ ಯಿನಾಂ ಕೊಡಲ್ಪಡುವದು.

W. HILL,
Offg. Dy. Supt. Bangalore District.

ಡಿಪ್ಯುಟಿ ಸೂಪರಿಂಟೆಂಡೆಂಟರವರ ಆಫೀಸ್
ಬೆಂಗಳೂರು ಡಿಸ್ಟ್ರಿಕ್ಟು ೩೦ನೇ ಯಪ್ರೀಲ್ ೧೮೬೭.

LOST.

The halves of the following currency notes; intimation given to the Currency Office, Madras.

Viz.,

1 Right Half No. $\frac{B}{6}$ 03583 for Rs. 500.
Do. No. $\frac{B}{11}$ 35024 for Rs. 100.

(Signed) H. M. ELIOTT.
Dy. Supt., *1st. Class.*

ಕಳಕೊಳ್ಳಲ್ಪಟ್ಟದ್ದು.

ಈ ಕೆಳಗೆ ತಿಳಿಸಲ್ಪಡುವ ಕರೆನ್ಸೀ ನೋಟುಗಳ ಅರ್ಧ ಭಾಗಗಳು ಹೋಗಲಾಡಿಸಲ್ಪಟ್ಟಿರುತ್ತೆಯಾಗಿ ಮದರಾಸ್ ಕರೆನ್ಸೀ ಆಫೀಸಿಗೆ ಜಾಹಿರ್ಮಾಡಿ ಯಿದೆ.

ಅವುಗಳ್ಯಾವವಂದರೆ.

೧ ಬಲಭಾಗ $\frac{B}{6}$ ೬೦ ೩೫೮೩ ೫೦೦ ರೂಪಾಯಿಗಳ ಬಗೆ.
೧ ಡಿಟೊ $\frac{B}{10}$ ೧೧ ೩೫೦೨೪ ೧೦೦ ರೂಪಾಯಿಗಳ ಬಗೆ.

(Signed) H. M. ELIOTT,
Dy. Supt. 1st Class.

NOTICE.

Whereas Mr. Thomas Hodgson a discharged soldier, from the late 2nd Madras European Infantry and an employé in the Mysore D. P. W., having died at Shimoga on the 30th January 1867, notice is hereby given that all persons having claims upon, being indebted or holding property belonging to, the said deceased, should appear at the Town Court of Shimoga in the Nugur Division of the Province of Mysore, within six months from this date, to state their claims, pay their debts and deliver up such property to the Town Magistrate, Shimoga.

SHIMOGA DISTRICT, DY. SUPT.'S OFFICE, *Dated 29th April* 1867.

H. M. ELIOTT, *Dy. Supt.*, 1st *Class.*

COIMBATORE DISTRICT.

HUE AND CRY SHEET.

DESCRIPTIVE ROLL OF BOODAPPA.

Sometimes called Mooneappa.

Son of ... ... of Gungojee Kottur village in the Ossoor Taluq of Salem District.

Age—about 40 years. Caste—Sevachari. Trade—cultivator and cattle dealer. Residence—Gungajee Kottur.

Height—5 feet 6½ inches. Hair—black; colour—dark brown.

Particular marks on person. Stoutly built—

General Appearance. Large mole on right shoulder blade, small mole one inch from the bottom of left ear, marks of burns on both knees, also marks of burns on both buttocks, a small mark on the outside of right eye, above the cheek bone—large black mustache—short scrubby black beard. Wears a top-knot, hair in front of head cut close—a little hair on chest—face rather long. Eyes slightly sunken, high cheek bones—ears stick out slightly. Knows a little Tamil. Speaks Telugu. Native language, Canarese.

Where and with whom last employed. And as what. Where and with whom last seen. — A Prisoner in Coimbatore.

How dressed. White head cloth—white waist cloth; wears lingum.

A. BALUM,
Supt. of Police.

ಪೊಲೀಸ ಇಸ್ತಿಹಾರ.

ಬೂದಪ್ಪ ನೆಂಬವನ ಚಹರೇ ಪಟ್ಟಿ.
ಮುನಿಯಪ್ಪ ನೆಂತಲೂ ಹೆಸರುಂಟು.
ಗಂಗೋಜಿ ಕೊತ್ತೂರು ಗ್ರಾಮ.
ಸೇಲಂ ಡಿಸ್ಟ್ರಿಕ್ಟು ಹೊಸೂರು ತಾಲ್ಲೂಕಿನಲ್ಲಿ

ವಯಸ್ಸು ಸುಮಾರು ೬೦ ಸಂವತ್ಸರಗಳು ಜಾತಿ ಶಿವಾಚಾರ, ವ್ಯಾಪಾರ ಜೇಸಾಯಗಾರ ಮತ್ತು ದನಗಳ ವ್ಯಾಪಾರ

ವಾಸಸ್ಥಳ ಗಂಗೋಜಿ ಕೊತ್ತೂರು

ಯೆತ್ತರ ೫ ಅಡಿ ೬½ ಅಂಗುಲ, ಕೂದಲು ಕಪ್ಪು, ವರ್ಣ ಕಪ್ಪು ಬೂದು ವರ್ಣ.

ಸಾಮಾನ್ಯ ರೂಪು

ಶರೀರದಲ್ಲಿ ಮುಖ್ಯವಾದ ಗುರುತುಗಳು. ಸ್ಥೂಲ ಶರೀರ, ಬಲಬಾಹುವಿನ ಮೇಲೆ ದೊಡ್ಡ ಪುಲಿಪುರಿ, ಯೆಡಕಿವಿಗೆ ಹೊಂದು ಅಂಗುಲ ಕೆಳಗೆ ಸಣ್ಣ ಪುಲಿಪುರಿ, ಯೆರಡು ಮೊಳಕಾಲುಗಳ ಮೇಲೂ ಬರೆಗಳ ಗುರುತು, ಪಿರೆಗಳ ಮೇಲೂ ಬರೆಗಳ ಗುರುತು, ಬಲಕಣ್ಣಿನ ಹೊರ ಭಾಗದಲ್ಲಿ ದವಡೇ ಯೆಲುವಿಗೆ ಮೇಲ್ ಭಾಗದಲ್ಲಿ ಹೊಂದು ಸಣ್ಣ ಗುರುತು, ಕಪ್ಪಿನ ದೊಡ್ಡ ಮೀಸೆ, ಸಣ್ಣಗೆ ಕಪ್ಪಾದ ದಾಡಿ, ಜುಟ್ಟು ಯಿರುತ್ತೆ. ತಲೆ ಮುಂದಗಡೆ ಕೂದಲುಂಟು ಸಣ್ಣನಾಗಿ ಕತ್ತರಿಸಿ ಯಿರುತ್ತೆ. ಯೆದೇ ಮೇಲೆ ಸ್ವಲ್ಪ ಕೂದಲು ಸ್ವಲ್ಪ ಪುಷ್ಟಾನೇ ಮುಖ ಸ್ವಲ್ಪ ಹಳ್ಳವಾದ ಕಣ್ಣುಗಳು ದವಡೆ ಮೂಳೆಯೆತ್ತರ ನಿಗುರುಗಿವಿ, ಸ್ವಲ್ಪ ಅರವ ತಿಳಿಯುವದು ತೆಲಗುಮಾತನಾಡುತ್ತಾನೆ ಕನ್ನಡ ಸ್ವಂತ ಭಾಷೆ.

ಯಲ್ಲಿ ಯಾರ ಸಂಗಡ ಕಡೇಗೆ ಕೆಲಸದಲ್ಲಿ ಇದ್ದದ್ದು, ಯಾವ ಕೆಲಸದಲ್ಲಿ ಯಾರ ಸಂಗಡ ಕಡೆಗೆ ಕಾಣ ಬಂದ. — ಕೋಯಂಬುತ್ತೂರಿನಲ್ಲಿ ಪೊಬ್ಬ ಕೈದಿಯಾಗಿ.

ಯಾವ ಪ್ರಕಾರ ಬಟ್ಟೆ ತೊಟ್ಟದ್ದು, ಬಿಳೀ ರುಮಾಲು ಬಿಳೀ ದೋತ್ರ ಲಿಂಗಾಕಟ್ಟಿದ್ದಾನೆ.

A. BALUM,
Supt. of Police.

HUE AND CRY SHEET.

DESCRIPTIVE ROLL OF APPANAH.

Son of Vagojee of Gungojee Kottur village in the Oosoor Taluq of Salem District.

He is brother-in-law of Boodappa.

Age—about 24 or 25 years. Caste—Sevachary. Residence—Gungojee Kottur.

Height—5 feet 3 inches. Hair—black; color—fair brown.

Particular marks on person. Rather slightly built, has a top knot, hair in front of head cut close, small mustache, a few hairs on the chin, a scar on the outside of left thigh, two marks of bullock horns, one in the centre of back, one on the left side under the short ribs, rather large mouth, thick under lip, a few hairs on centre of chest.

General Appearance. Suffers from stricture. Face—round; nose—short and small; looks slightly delicate.

What languages can speak, or write. Knows Telugu. Native language, Canarese.

How dressed. Wears lingum—white cloths.

A. BALUM,
Supt. of Police.

ಪೋಲೀಸ್ ಇಸ್ತಿಹಾರ್.

ಅಪ್ಪನ್ನ ನೆಂಬವನ ಚಹರೇ ಪಟ್ಟಿ.

ಸಂಗೋಜಿ ಕೊತ್ತೂರು ಗ್ರಾಮದ ವಾಗೋಜಿ ಯೆಂಬವನ ಮಗ.

ಸೇಲಂ ಡಿಸ್ಟ್ರಿಕ್ಟು ಹೊಸೂರು ತಾಲ್ಲೂಕು

ಇವನು ಬೂದಪ್ಪನ ಭಾವಮೈದ

೨೪—೨೫ ವರುಷಗಳ ವಯಸ್ಸು ಜಾತಿ ಶಿವಾಚಾರ

ವಾಸಸ್ಥಳ ಗಂಗೋಜೀ ಕೊತ್ತೂರು

ಪುದ್ದ ೫ ಅಡಿ ೩ ಅಂಗುಲ ಕೂದಲು ಕಪ್ಪು ಕೆಂಪುನೊಡನೆ ಶೇರಿದ ಬೂದು ಬಣ್ಣ.

ಸಾಮಾನ್ಯ ರೂಪು

ಶರೀರ ಮುಖ್ಯ ಲಕ್ಷಣಗಳು—ಸ್ವಲ್ಪ ತೆಳ್ಳನೆ ಮನುಷ್ಯ ಜುಟ್ಟು ಯಿರುತ್ತೆ. ತಲೆ ಮುಂದುಗಡೆ ಕೂದಲು ಕತ್ತರಿಸಿ ಯಿರುತ್ತೆ, ಸಣ್ಣ ಮೀಸೆ, ಗಡ್ಡದ ಮೇಲೆ ಸ್ವಲ್ಪ ಕೂದಲು, ಯೆಡಗಡೆ ಹೊರತೊಡೆಯ ಮೇಲೆ ಗಾಯದ ಮಚ್ಚೆ, ಯೆತ್ತು ಕಿವಿದ ಗುರುತುಗಳು ಯೆರಡು ಯಿವೆ ಹೊಂದು ಬೆನ್ನಿನ ಮಧ್ಯದಲ್ಲಿಯೂ ಹೊಂದು ಪಕ್ಕ ಯೆಲುವಿನ ಕೆಳಗಡೆಯೂ ಯಿರುತ್ತೆ. ಸ್ವಲ್ಪ ಅಗಲ ಬಾಯಿ ದಪ್ಪನೆ ಕೆಳತುಟಿ, ಯೆದೆಯ ಮಧ್ಯದಲ್ಲಿ ಕೆಲವು ಕೂದಲು ಯಿರುತ್ತೆ ಮೂತ್ರ ಕಟ್ಟರೋಗ ಅನುಭವಿಸುತ್ತಾನೆ, ಗುಂಡು ಮುಖ ಮೂಗು ಸಣ್ಣ ಮೂಗಾಗಿಯೂ, ಹ್ರಸ್ವವಾಗಿಯೂ ಯಿಧೆ. ಸ್ವಲ್ಪ ದುರ್ಬಲನಾಗಿ ಕಾಣುತ್ತಾನೆ.

ಯಾವ ಭಾಷೆ ಮಾತಾಡಬಲ್ಲ ಅಥವಾ ಬರಿಯಬಲ್ಲನು ತೆಲುಗು ತಿಳಿಯುವದು ಸ್ವಂತ ಭಾಷೆ ಕನ್ನಡ

ಹ್ಯಾಗೆ ಬಟ್ಟೆ ತೊಟ್ಟಿದ್ದನು, ಲಿಂಗ ಕಟ್ಟಿರುತ್ತಾನೆ, ಬಿಳಿ ಬಟ್ಟೆ ಧರಿಸುತ್ತಾನೆ.

A. BALUM,
Supt. of Police.

HUE AND CRY SHEET.

DESCRIPTIVE ROLL OF VAGOJEE

Son of .. .. of Gungojee Kottur village in the Oosoor Taluq of Salem District.

He is father-in-law of Boodappa.

Age—50 years. Caste—Sevachary. Height—5ft. 1 inch. Color—dark brown.

Particular marks on person. General Appearance. Almost blind on right eye, a speck on the eye ball, over the pupil there is slight protuberance, has no top knot, grey hair all over the head, dark grey mustaches, white, rather short beard, skin shrivelled inside the arms, belly, and over knees, bruises, rather burnt, thin mark of boils under the left shoulder blade, a little grey hair on the top of both shoulders, marks of small pox on front of left thigh.

What languages can speak, or write. Knows a little Tamil, talks Telugu well; native language, Canarese. Of Mahratta family.

Wears a Lingum and white cloth.

A. BALUM,
Supt. of Police.

ಪೋಲೀಸ್ ಇಸ್ತಿಹಾರ್.

ನಾಗೋಜಿ ಎಂಬವನ ಚಹರೇ ಪಟ್ಟಿ.

ಗಂಗೋಜೀ ಕೊತ್ತೂರು ಗ್ರಾಮ
ಸೇಲಂ ಡಿಸ್ಟ್ರಿಕ್ಟ್ ಹೊಸೂರು ತಾಲ್ಲೂಕು.
ಇವನು ಬೂದಪ್ಪನೆಂಬನ ಮಗನು.
೫೦ ವರುಷಗಳ ವಯಸ್ಸು ಶಿವಾಚಾರ ಜಾತಿ.
ಯೆತ್ತರ ೫ ಅಡಿ ೧ ಅಂಗುಲ, ವರ್ಣ ಕಪ್ಪು ಮಿಶ್ರವಾದ ಬೂದುವರ್ಣ.

ಸಾಮಾನ್ಯ ರೂಪು. ಮುಖ್ಯಗಳಾದ ಅಂಗ ಲಕ್ಷಣಗಳು. ಬಲಗಣ್ಣು ಬಹುಶಃ ಕುರುಡು ಗುಡ್ಡಿನ ಮೇಲೆ ಹುವ್ವಿಧೆ. ಕಣ್ಣು ಪಾಪನ ಮೇಲೆ ಸಣ್ಣ ಕಾಯಿ ಹೊರಟಿದೆ. ಜುಟ್ಟಿಲ್ಲ. ಗಡ್ಡವೆಲ್ಲ ನರತಿದೆ. ಕಪ್ಪು ಮಿಶ್ರವಾದ ನರೆತಿರುವ ಮೀಸೆ. ಬೆಳ್ಳಗೆ ಸ್ವಲ್ಪ ಸಣ್ಣ ಗಡ್ಡ, ಒಳ ಬಾಹುವಿನಲ್ಲಿಯೂ, ಹೊಟ್ಟೆಯ ಮೇಲೂ, ಮೊಣಕಾಲುಗಳ ಮೇಲೂ ಚರ್ಮ ಸುಕ್ಕು ಬಿದ್ದಿವೆ.

ಯೆಡ ಭುಜದ ಕೆಳಗೆ ಕುರುವಿನ ಸಣ್ಣ ಗುರುತು ಎರಡು ಭುಜಗಳ ಮೇಲೂ ಸ್ವಲ್ಪ ಸ್ವಲ್ಪ ಬಿಳೀ ಕೂದಲು, ಎಡತೊಡೆ ಮುಂಭಾಗದಲ್ಲಿ ಸಿಡುಬಿನ ಮಚ್ಚೆಗಳು.

ಯಾವ ಭಾಷೆ ಮಾತನಾಡ ಬಲ್ಲ ಯಾ ಬರೆಯ ಬಲ್ಲನು. ಸ್ವಲ್ಪ ಅರವ ತಿಳಿಯುವದು. ತೆಲುಗು ಚನ್ನಾಗಿ ಮಾತನಾಡುತ್ತಾನೆ. ಸ್ವಂತ ಭಾಷೆ ಕನ್ನಡ. ಮಹಾರಾಷ್ಟ್ರ ವಂಶಕ್ಕೆ ಸೇರಿದವನು.

ಹ್ಯಾಗೆ ಬಟ್ಟೆ ತೊಡುತ್ತಾನೆ ಲಿಂಗ ಕಟ್ಟುತ್ತಾನೆ ಬಿಳೀ ಬಟ್ಟೆ.

A. BALUM, *Supt. of Police.*

HUE AND CRY SHEET.

DESCRIPTIVE ROLL OF NAGOJEE.

Son of .. .. of Gungojee Kottur village in the Oosoor Taluq of Salem District.

Age—about 30 years. Caste—Mahratta. Residence—Gungojee Kottur. Height—5ft 5 inches; color—dark brown.

Particular marks on person. General Appearance. Slightly built, small tumour two inches above the navel. Marks of a burn at bottom of chest in centre, bad nail on the right great toe, one small scar in centre of forehead and a small mark over right eye brow, black mustache and not cut short, black beard.

What languages can speak or write. Talks Telugu; native language—Canarese.

How dressed. Wears lingum and white cloth.

A. BALUM,
Supt. of Police.

ಪೋಲೀಸ್ ಇಸ್ತಿಹಾರ್.

ನಾಗೋಜೀ ಯೆಂಬವನ ಚಹರೇ ಪಟ್ಟಿ.

ಗಂಗೋಜೀ ಕೊತ್ತೂರು ಗ್ರಾಮ.
ಸೇಲಂ ಡಿಸ್ಟ್ರಿಕ್ಟ್ ಹೊಸೂರು ತಾಲ್ಲೂಕು.
ಸುಮಾರು ೩೦ ವರುಷಗಳ ವಯಸ್ಸು ಮಹರಾಷ್ಟ್ರ ಜಾತಿ
ವಾಸಸ್ಥಳ ಗಂಗೋಜೀ ಕೊತ್ತೂರು.
ಎತ್ತರ ೫ ಅಡಿ ೫ ಅಂಗುಲ ಬಣ್ಣ ಕಪ್ಪು ಮಿಶ್ರವಾದ ಬೂದು ಬಣ್ಣ.

ಸಾಮಾನ್ಯ ರೂಪು. ಮುಖ್ಯವಾದ ಅಂಗಲಕ್ಷಣಗಳು. ತೆಳ್ಳನೆ ಮನುಷ್ಯ. ನಾಭಿಗೆ ಎರಡಂಗುಲ ಮೇಲ್ಗಡೆ ಸಣ್ಣ ಗಷ್ಟೆ. ಯೆದೆಯ ಕೆಳಗೆ ಮಧ್ಯದಲ್ಲಿ ಬರೆಯ ಗುರುತು ಬಲಗಾಲು ದೊಡ್ಡ ಬೆರಳಿನ ಉಗುರು ಹಾಳಾಗಿದೆ. ಹಣೆಯ ಮಧ್ಯದಲ್ಲಿ ಒಂದು ಸಣ್ಣ ಘಾಯದ ಮಚ್ಚೆ ಇದೆ. ಬಲಗಣ್ಣು ಹುಬ್ಬಿನ ಮೇಲೆ ಸಣ್ಣ ಗುರುತಿದೆ. ಕಪ್ಪಿನ ಮೀಸೆ ಕತ್ತರಿಸಿ ಇರುವದಿಲ್ಲವು ಕಪ್ಪಿನ ದಾಡಿ.

ಯಾವ ಭಾಷೆ ಮಾತನಾಡ ಅಥವಾ ಬರೆಯ ಬಲ್ಲ. ತೆಲುಗು ಮಾತನಾಡುವನು. ಸ್ವಂತ ಭಾಷೆ ಕನ್ನಡ.

ಬಟ್ಟೆ ತೊಟ್ಟರ ತಕ್ಕದ್ದು. ಲಿಂಗಕಟ್ಟಿದ್ದಾನೆ ಬಿಳೀ ಬಟ್ಟೆ ಹಾಕಿ ಕೊಳ್ಳುತ್ತಾನೆ.

A. BALUM,
Supt. of Police.

NOTICE.

The Government High School, Bangalore, will re-open on Monday, the 20th Instant.

CHAS. WATERS,
Principal.

BANGALORE DISTRICT.

Notice regarding the sale by auction of immovable property under attachment in satisfaction of a decree, in Closepet Talook, on the 28th Instant.

ಬೆಂಗಳೂರು ಡಿಸ್ಟ್ರಿಕ್ಟು ನೆಟಿವ್ ಅಶಿಷ್ಟಾಂಟ್ ಸೂಪರಿಂಟೆಂಡೆಂಟ್ ಕೋರ್ಟ್ ನಿಂದಾ.

ಸರ್ 1866ನೇ ಯಿಸವಿ ಅರಿಜನಲ್ ನಂಬರ್ ೬.

ವಾದಿ ಕುಲೀನಪ್ಯಾಟಿ ತಾಲ್ಲೂಕು ಕಸಬಾದಲ್ಲಿರುವ ರಮ್ಮೆದಳಾ೪ ಮಾಹಂಮ್ಮದ ಹಯಾತ್ತ ಸಾಹೇಬರ ಮಗ ಪೀರಸಾಬಿ.	ಪ್ರತಿವಾದಿ ಸದರೀ ತಾಲ್ಲೂಕು ಯಿರೆಹಳ್ಳಿ ಗ್ರಾಮದಲ್ಲಿರುವ ಪೂಂಮರಸಾಬಿ ಮಗ ಪೀರಸಾಬಿ.

ಪ್ರಶಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ.

ಈ ನಂಬರ್ ವಾದಿಗೆ ಪ್ರತಿವಾದಿ ಯಿಂದ ಸಲ್ಲತಕ್ಕ ಡಿಕ್ರಿ ಮೊಬಲಗಾಗಿ ಪ್ರತಿವಾದಿಯ ಬಾಬತು ಕುಲೀನಪ್ಯಾಟಿ ತಾಲ್ಲೂಕು ಯಿರೇ ಗ್ರಾಮದಲ್ಲಿರುವ ಷಹತೂತ್ ತೋಟಾ ಜಪ್ತಾಗಿರುವದು ಅಂದರೆ ನಂಬರ್ 112ನೇ ಬಿಜವರಿ ೪ ಕೊಳಗದ ೨|| ಪಡಿಗೆ ಕಂದಾಯ ೦||೪|– ಮತ್ತು 66ನೇ ನಂಬರ್ ತೋಟದ ಪೈಕಿ ಅರವಾಸಿ ತೋಟವೂ ಯಿದು ಶಿವಾಯಿ ಕಾರಖಾನೆ ಮನೆ ಸಹಾ ಮಾಹೇ ಮಜಕೂರ್ ತಾರೀಖು 28ರಲ್ಲು ಇಲಾಖಾ ಮಜಕೂರು ನಾಜರ್ ಮಾರಿಫತ್ ಹರಾಜ್ ಮಾಡಲ್ಪಡುತ್ತಯಾಗಿ ಯಿಛೆ ವುಳ್ಳ ಸಮಸ್ತ ಜನಗಳನ್ನು ಸದರೀ ಹರಾಜಾಗತಕ್ಕ ಸ್ಥಿತಿಗಳ ಬಳಿಗೆ ಹಾಜರಾಗ ತಕ್ಕದ್ದು.

TOOMKOOR DISTRICT.

Notice inviting claimants to immovable property under attachment in satisfaction of a decree, at Toomkoor, to appear and prefer their claims within 15 days from the 7th May 1867.

ತುಮುಕೂರು ಡಿಸ್ಟ್ರಿಕ್ಟು ಸಬ್ ಡಿವಿಜನ್ ಯು|| ಅ|| ಸೂ|| ಕೋರ್ಟು.

ಸರ್ ೧೮೬೬ನೇ ಇಸವಿ ಅರಿಜನಲ್ ನಂಬರು ೧೪.

ವಾದಿ	ಪ್ರತಿವಾದಿಗಳು
ಕೊರಟಗೆರೆ ತಾಲ್ಲೂಕು ಕಸಬಾ ಕೊರಟಗೆರೇಲಿರುವ ಮುದ್ದು ಮಲ್ಲೈಯ್ಯ.	ಕೊರಟಗೆರೆ ತಾಲ್ಲೂಕು ವಡ್ಡರಹಳ್ಳೀಲಿರುವ ಚಂನಮಲ್ಲೈಯ್ಯನ ಮಕ್ಕಳು ಚಿಕ್ಕಮಲ್ಲಪ್ಪ ವಗೈರೆ ನಾಲ್ಕು ಮಂದಿ.

ವಾದಿಗೆ ಪ್ರತಿವಾದಿಗಳಿಂದ ಪಾವತಿ ಆಗತಕ್ಕ ಡಿಕ್ರಿ ಐವಜಿಗೋಸ್ಕರ ಪ್ರತಿವಾದಿಗಳ ಬಾಬತು ಕೊರಟಗೆರೆ ಕಸಬೇಲಿರುವ ಮನೆ ಯಿದಕ್ಕೆ ಸೇರಿದ್ಧ ಅಂಗಡಿ ಸುದಾ ಅದೇ ತಾಲ್ಲೂಕು ವಡ್ಡರಹಳ್ಳೀಲಿರುವ ಮನೆ ೧ ತೋಟಗಳು ೩ ಸುದಾ ಜಪ್ತಿ ಮಾಡಿಸಿಯಿರುವದ್ದರಿಂದ ಈ ಸ್ವತ್ತಿನ ಮೇಲೆ ಕ್ರಯ, ಭೋಗ್ಯ, ಬಾಧ್ಯತೆ, ಆಧಾರ ಮುಂತಾಗಿ ತಕರಾರುಗಳು ಮಾಡತಕ್ಕ ವಿಶಿಷ್ಟ ಜನಗಳನ್ನು ಈ ಇಸ್ತಿಹಾರ್ ಪ್ರಸಿದ್ಧವಾದ ಲಾಗಾಯಿತು ಹದಿನೈದು ದಿವಸದ ವಾಯಿದೆವಳಗೆ ತಮ್ಮ ತಕರಾರುಗಳನ್ನು ಈ ಕೋರ್ಟಿನಲ್ಲಿ ನಮೂದು ಮಾಡಬೇಕು ಆರೀತಿ ಮಾಡದೆ ವಾಯಿದೆ ಮೀರಿದ ನಂತರ ತರತಕ್ಕ ತಕರಾರುಗಳನ್ನು ಅಂಗೀಕರಿಸುವದಿಲ್ಲ.

ಬತಾರೀಖು ೭ನೇ ಮಾಹೆ ಮೇ ಸರ್ ೧೮೬೭ನೇ ಇಸವಿ, ಮೊಕ್ಕಾಂ ತುಮುಕೂರು.

E. ARMSTRONG.

MYSORE DISTRICT.

Notice regarding a baize coat with an old knife in the pocket, two letters, a piece of old cloth, &c, found in the Travellers' Bungalow, Mysore.

ಮಡಿಕೇರೆ ಯಿಂದಾ ತಿರುಚಿನಾಪಲ್ಲಿಗೆ ಹೊರಟು ಹೋದ ಕೆಪರ್ಟನ್ ಮರಿಬಾಲ್ ಸಾಹೇಬರವರು ಮಾಹೆ ಮಜಕೂರು ೨೯ನೇ ತಾರೀಖಿನಲ್ಲಿ ಮೈಸೂರು ವೀರಣಗೆರೆ ಮುಸಾಫರ್ ಬಂಗ್ಲಾಕ್ಕೆ ಬಂದು ಯಿಳದು ಯಿದ್ದು ಹೊರಟು ಹೋಗುವಲ್ಲು ಬನಾತಿನ ಹಳೆ ಕವಚ ೧, ಅದರ ಜೋಬಿನಲ್ಲಿ ಹಳೆ ಕತ್ತಿ ೧, ಕಾಗದ ೨, ಹಳೆಬಟ್ಟೆ ತುಕುಡಾ ೧, ನಸ್ಯದ ಪೆಟ್ಟಿ, ಪುಸ್ತನ್ನೂ ಬಿಟ್ಟು ಹೋಗಿರುವಹಾಗು ಬಹುಶಃ ಯಿವುಗಳೆಲ್ಲಾ ಆ ಸಾಹೇಬರವರ ಬಟ್ಲೇರ್ ರಂಗಸಾಮಿ ಯೆಂಬುವನದೆಂದು ಕ್ಯಾಂಟಿಂತಾ ಅರ್ಜಿಯಲ್ಲಿ ವಿವರಿಸಿ ಯಿರುತ್ತಾರೆ.

CUDOOR DISTRICT.

Notice regarding the sale of immovable property in satisfaction of a decree, at Chickmoogloor, on the 23rd and 27th May 1867.

ಚಿಕ್ಕ ಮುಗಳೂರು ತಾಲ್ಲೂಕಿನ ಅ|| ಸೂ|| ಕೋರ್ಟು

ಸರ್ ೧೮೬೭ನೇ ಇಸವಿ ಅರಿಜನಲ್ ನಂಬರ್ ೯.

ವಾದಿ ದೇವರಾಯ ಪ್ಯಾಟೆಯಲ್ಲಿ ಇರುವ ಬೆಂಗಳೂರು ಪುಂಮರಸಾಬಿಗೆ ಪೈಸಲ್ ವಗೈರೆ ರೂಪಾಯಿ ೯೨೦|| ಮತ್ತು ಪಾವತಿ ವರಿಗಿನ ಬಡ್ಡಿ ಸಹ ಕೊಡುವ ಪ್ರತಿವಾದಿ ದೇವರಾಯ ಪ್ಯಾಟೆಯಲ್ಲಿ ಇರುವ ಅಕ್ಕಸಾಲೆ ಸೋಮಂಣನ ಬಾಬತು ಜಿಂದಿಗಿ ಜಪ್ತಿ ಆದ್ದರ ಪೈಕಿ ಸ್ಥಿರ ಜಿಂದಿಗೆ ಜಪ್ತಿ ಆದದ್ದರ ತಪಶೀಲು.

ದೇವರಾಯ ಪ್ಯಾಟೆಯಲ್ಲಿ ಇರುವ ಅಂಚಿನ ಮನೆ ೧ಕ್ಕೆ ಅಂದಾಜು ರೂಪಾಯಿ ೨೦೦

ಲಕ್ಕುವಳ್ಳಿ ತಾಲ್ಲೂಕಿನಲ್ಲಿ ಇರುವ ಬೂಂದು ತೋಟ ೨ಕ್ಕೆ ಫಸಲಿ ಗಿಡಾ ೬–೭–ಸಾವಿರ ಯಿದ್ಧೆ ಇದಕ್ಕೆ ಅಂದಾಜು ರೂಪಾಯಿ ೧೦೦

ಸದರಿ ತಾಲ್ಲೂಕು ಜೋಕೊಳ್ಳಿ ದಿಬ್ಬದ ಬಳಿ ಇರುವ ಹದಿಗೆ ತೋಟ ೧ಕ್ಕೆ ಅಂದಾಜು ರೂಪಾಯಿ ೬೫

ಅಂತು ೩೬೫ ರೂಪಾಯಿಗಳ ಈ ಜಿಂದಿಗೆ ಪೈಕಿ ಮನೆ ಈ ತಿಂಗಳು ತಾರೀಖು ೨೩ಕ್ಕೆ ಅಮಾನನ ಮಾರೀಪತ್ತು ತೋಟಾ ೨ ಕೋರ್ಟು ರೂಬರೂ ತಾರೀಕು ೨೭ಕ್ಕೆ ಈ ಮೇರೆಗೆ ಹರಾಜಿಗೆ ನಿಶ್ಚಯಿಸಿ ಇಸ್ತಿಹಾರ್ ಕೊಟ್ಟಿದೆ.

ತಾರೀಕು ೯ನೇ ಮಾಹೆ ಮೇ ಸನ್ ೧೮೬೭ನೇ ಇಸವಿ ಮೊಕ್ಕಾಂ ಚಿಕ್ಕಮಗಳೂರು.

P. VENKETASUBIAH,

DEPUTY SUPERINTENDENT'S OFFICE,
Bangalore District.

Season Report of the Bangalore District for the month of April 1867.

A few showers of rain fell in different parts of the District during the month, and were favorable to the Vyshakh rice crop which is approaching maturity. Sugarcane has been planted extensively under a number of tanks. The ryots have commenced to plough their fields. Markets are well supplied, and prices shew a downward tendency.

The health of the District continues good, and little or no disease prevails among the cattle.

W. HILL,
Deputy Superintendent.

ಸನ್ ೧೮೬೭ನೇ ಇಸವಿ ಯೇಪ್ರೆಲ್ ತಿಂಗಳ ಬಾಬತು ಬೆಂಗಳೂರು ಡಿಸ್ಟ್ರಿಕ್ಟಿನ ಕಾಲಸ್ಥಿತಿ ರಿಪೋರ್ಟು.

ಡಿಸ್ಟ್ರಿಕ್ಟಿನ ಬೇರೆಬೇರೆ ಪ್ರದೇಶಗಳಲ್ಲಿ ತಿಂಗಳಲ್ಲಿ ಯಲ್ಲ ಕೊಂಚ ಮಳೆ ಆದ್ದರಿಂದ ಪಕ್ವಕ್ಕೆ ಸಮೀಪವಾಗಿರುವ ತರೀ ಬೆಳೆಗೆ ಅನುಕೂಲವಾಗಿದೆ. ಅನೇಕ ಕೆರೆಗಳೊಳಗೆ ಗನ್ನಾ ಸಾಗುವಳಿ ವಿಸ್ತಾರವಾಗಿರುತ್ತದೆ. ರೈತರು ತಮ್ಮ ಹೊಲಗಳನ್ನು ಉಳುವದಕ್ಕೆ ಆರಂಭಿಸಿದ್ದಾರೆ. ಅಂಗಡಿಗಳಲ್ಲಿ ವಿಶೇಷವಾಗಿ ಸಾಮಾನು ಯಿದೆ, ಮತ್ತು ಖರೀದಿ ಕಮ್ಮಿ ಆಗುವ ಹಾಗೆ ಕಾಣುತ್ತದೆ. ಡಿಸ್ಟ್ರಿಕ್ಟಿನಲ್ಲಿ ಆರೋಗ್ಯವಾಗಿಯೇ ಯಿದೆ. ದನಗಳಲ್ಲಿ ರೋಗವೇನು ವ್ಯಾಪಿಸುವದಿಲ್ಲ.

(Signed) W. HILL,
Deputy Superintendent.

Season Report of the Mysore District for March 1867.

There were some slight falls of rain in this month, in several parts of the District.

2. Jollah and black & green gram were sown in the Taluqs of Chamrajnugur, Mysore Ashtagram, Mullvullee, and Putten Ashtagram, and the crop of Bengal gram, in Chamrajnugur, was reaped in this month.

3. The condition of the crops, is reported on the whole, to be good.

4. The following table shews the rain fall at Mysore, and temperature for March 1867.

	Thermometer.		Rain	
	At 6 A. M.	At 6 P. M.	Inches.	Cents.
Maximum.	84°	87°		
Minimum.	75°	83°	5	17
Average.	79½°	85°		

5. The public health has been generally good. Fever and small pox prevailed to a slight extent in some parts of the District. The number of deaths, from disease and accident, is reported to have been 657.

6. The loss in cattle is estimated at 2135, of which 104 are said to have been slain by wild beasts.

T. M. McHUTCHIN,
Deputy Superintendent.

ಸನ್ ೧೮೬೭ನೇ ಇಸವಿ ಮಾರ್ಚಿ ಮಾಹೇ ಬಾಬತು ಮೈಸೂರ ಡಿಸ್ಟ್ರಿಕ್ಟಿನ ಕಾಲಸ್ಥಿತಿ ರಿಪೋರ್ಟು.

ಡಿಸ್ಟ್ರಿಕ್ಟು ಪೈಕಿ ಕೆಲವು ಸ್ಥಳಗಳಲ್ಲಿ ಸದರೀ ತಿಂಗಳೊಳಗೆ ಸ್ವಲ್ಪ ಮಳೆ ಬಿತ್ತು.

ಚಾಮರಾಜನಗರ, ಮೈಸೂರ ಅಷ್ಟಗ್ರಾಮ, ಮಳವಳ್ಳಿ, ಪಟ್ಟಣ ಅಷ್ಟಗ್ರಾಮ ಈ ತಾಲ್ಲೂಕುಗಳಲ್ಲಿ ಜೋಳ ಉದ್ದು ಹೆಸರು ಸಹ ಬಿತ್ತಲ್ಪಟ್ಟಿತು. ಚಾಮರಾಜ ನಗರದಲ್ಲಿ ಕಡ್ಲೆ ಫಸಲ್ ಈ ತಿಂಗಳೊಳಗೆ ಕಟಾವಾಯಿತು.

ಫಸಲೆಲ್ಲಾ ಚೆನ್ನಾಗಿರುವಂತೆ ತಿಳಿಯ ಬರುತ್ತೆ.

ಈ ಕೆಳಗೆ ಬರುವ ಟೇಬಲಿನಿಂದ ಮೈಸೂರಲ್ಲಿ ಮಳೆ ಆದ್ದು ೧೮೬೭ನೇ ಮಾರ್ಚಿ ಮಾಹೇಯಲ್ಲಿ ಇದ್ದ ಹವಾವಿನ ಸ್ಥಿತಿಯೂ ತಿಳಿಸಲ್ಪಡುತ್ತೆ.

	ಥರಮಾಮಿಟರ್.		ಮಳೆ.	
	ಪ್ರಾತಃ ೬ ಘಂಟೆಗೆ	ಸಾಯಂ ೬ ಘಂಟೆಗೆ	ಅಂಗುಲ.	ಸೆಂಟಿಗಳು.
ಜಾಸ್ತಿ	೮೪	೮೭		
ಕಮ್ಮಿ	೭೫	೮೩	೫	೧೭
ಸರಾಸರಿ	೭೯½	೮೫		

ಜನಗಳಿಗೆಲ್ಲಾ ಸಾಮಾನ್ಯವಾಗಿ ಆರೋಗ್ಯವಿತ್ತು. ಡಿಸ್ಟ್ರಿಕ್ಟು ಪೈಕಿ ಕೆಲವು ಭಾಗಗಳಲ್ಲಿ ಕೆಲವು ಮಟ್ಟಿಗೆ ಜ್ವರೋಪದ್ರವವೂ ಸಿಡುಬು ಉಪದ್ರವವೂ ವ್ಯಾಪಿಸಿತು. ರೋಗದಿಂದಲೂ ಇತರ ಅಪಾಯದಿಂದಲೂ ೬೫೭ ಮಂದಿ ಮೃತಪಟ್ಟಂತೆ ತಿಳಿಯ ಬರುತ್ತೆ.

ದನಗಳ ಪೈಕಿ ೨೧೩೫ ಕಾಲ್ನಡೆ ಸತ್ತು ಹೋಗಿರುತ್ತವೆ. ಈ ಪೈಕಿ ೧೦೪ ದನಗಳು ಕಾಡು ಮೃಗಗಳಿಂದ ಕೊಲ್ಲಲ್ಪಟ್ಟವಂತೆ.

T. M. McHUTCHIN,
Dy. Supt. Mysore District.

LIST OF DEAD AND UNCLAIMED LETTERS LYING IN THE MYSORE ANCHAY OFFICE.

ಯಾದಾಸ್ತು ಹಜೂರ್ ಅಂಚೆ ಕಚೇರಿ ಡೆಡ್ ಲೆಟರ್ ಆಫೀಸಿಗೆ ದಾಖಲಾದ ಸನ್ ೧೮೬೭ನೇ ಇಸವಿ.

ನಂಬರು	ರವಾನಿಸಿದ	ಸಾಲ್	ಮಾಹೇ	ಯಾವ ಊರಿಂದ	ಯಾವ ಊರಿಗೆ	ಯಾರಿಗೆ		ಹಾಸಲ್ ಅ.	ಪೈ.
೧	ತಾ॥ ೨೮ನೇ	ಮಾರ್ಚಿ	೬೭	ಬೆಂಗಳೂರಿಂದ	ಮೈಸೂರಿಗೆ	ಮಾಜಿ ಬಾರ್ ಇಲಾಖಾ ಪೇಷ್ಕಾರ ಮಹಮ್ಮದ್ ಜಾಫರನ ಮಗ ಮಹಮ್ಮದಲ್ಲಿಗೆ ರೆಸಿಡೆಂಸಿ ಇಲಾಖಾ ಇಂಡಾರ್ಸ್ನ ನಂ ೪೦			
೨	೧೫	೩	೬೭	ಬೆಂಗಳೂರಿಂದ	ಆನೆಕಲಿಗೆ	ಬ್ಯಾಚಲರಸಾಹೆಬರಿಗೆ	..	೦	೬
೩	೧೨	೩	೬೭	ಡಿಟೋ	ಶ್ರೀರಂಗಪಟ್ಟಣಕ್ಕೆ	ಪಾದೆಮಿಯ್ಯಾಗೆ	..	೦	೬
೪	೧೨	೩	೬೭	ಡಿಟೋ	ಹಿರಿಯೂರಿಗೆ	ರುದ್ರೈಯ್ಯನಿಗೆ	..	೦	೬
೫	೨೬	೨	೬೭	ಡಿಟೋ	ಮೈಸೂರಿಗೆ	ನಾರಾಯಣಶಾಸ್ತ್ರಿಗೆ	..	೦	೬
೬	೨೧	೩	೬೭	ಡಿಟೋ	ಡಿಟೋ	ನಾಕಿಂಶೆಟ್ಟರಿಗೆ	..	೦	೬
೭	೧೭	೩	೬೭	ಡಿಟೋ	ಮೈಸೂರಿಗೆ	ವೆಂಕಟರಮಣಪ್ಪನಿಗೆ	..	೦	೬
೮	೨೭	೩	೬೭	ಡಿಟೋ	ಮೈಸೂರಿಗೆ	ಲಕಂಣನಿಗೆ	..	೦	೬
೯	೧೯	೩	೬೭	ಡಿಟೋ	ಚಿತ್ರದುರ್ಗಕ್ಕೆ	ಸೂದಪ್ಪನಿಗೆ	..	೦	೬
೧೦	೧೪	೩	೬೭	ಡಿಟೋ	ಚಿತ್ರದುರ್ಗಕ್ಕೆ	ಯೆ. ಯಿ. ಪ್ರೈಸ ಸಾಹೆಬರಿಗೆ	..	೦	೬
೧೧	೫	೩	೬೭	ಡಿಟೋ	ಮೈಸೂರಿಗೆ	ಶೇಷಾಚಾರ್ರಿಗೆ	..	೦	೬
೧೨	೩	೩	೬೭	ಡಿಟೋ	ಗೋರೀಬಿದನೂರಿಗೆ	ವೆಂಕಟರಾಮಪ್ಪನಿಗೆ	..	೦	೬
೧೩	೨೦	೩	೬೭	ಡಿಟೋ	ಸರಜಾಪುರಕ್ಕೆ	ರಾಮಸ್ವಾಮಿಗೆ	..	೦	೬
೧೪	೬	೩	೬೭	ಡಿಟೋ	ಮಂಜಿರಾಬಾದಿಗೆ	ಜಪ್ಪ ಸಾಹೆಬರಿಗೆ	..	೦	೬
೧೫	೫	೨	೬೭	ಡಿಟೋ	ಚನ್ನರಾಯಪಟ್ಟಣಕ್ಕೆ	ಬಾಕರಸಾಹೆಬರಿಗೆ	..	೦	೬
೧೬	೩೦	೧	೬೭	ಡಿಟೋ	ಚಿತ್ರದುರ್ಗಕ್ಕೆ	ಯೆ. ಯಿ. ಪ್ರೈಸ ಸಾಹೆಬರಿಗೆ	..	೦	೬
೧೭	೨೪	೩	೬೭	ಡಿಟೋ	ಮೈಸೂರಿಗೆ	ಹಯಾತ್‌ಸಾಬಿಗೆ	..	೦	೬
೧೮	೨೫	೨	೬೭	ಡಿಟೋ	ದೊಡ್ಡಬಳ್ಳಾಪುರಕ್ಕೆ	ಅರುಣಾಚಲರಾಯರಿಗೆ	..	೧	೦
೧೯	೭	೩	೬೭	ಡಿಟೋ	ಮೈಸೂರಿಗೆ	ತಿಂಮೈಯ್ಯನಿಗೆ	..	೦	೬
೨೦	೮	೩	೬೭	ಡಿಟೋ	ಕೋಲಾರಕ್ಕೆ	ಲಿಂಸ್ನಾರಡು ಸಾಹೆಬರಿಗೆ	..	೦	೬
೨೧	೩	೨	೬೭	ಡಿಟೋ	ಶಿವಮೊಗ್ಗೆಗೆ	ರಾಮಸ್ವಾಮೈಯ್ಯಂಗಾರ್ರಿಗೆ	..	೦	೬
೨೨	೨	೨	೬೭	ಡಿಟೋ	ಶಿವಮೊಗ್ಗೆ	ಬಾಬೂಮಿಯ್ಯಾಗೆ	..	೦	೬
೨೩	೫	೨	೬೭	ಡಿಟೋ	ಚನ್ನರಾಯಪಟ್ಟಣಕ್ಕೆ	ಕೇಶವಪ್ಪನಿಗೆ	..	೦	೬
೨೪	೨೬	೩	೬೭	ಡಿಟೋ	ಮೈಸೂರಿಗೆ	ತಂಮೈಯ್ಯನಿಗೆ	..	೦	೬
೨೫	೧೨	೩	೬೭	ಡಿಟೋ	ಚನ್ನರಾಯಪಟ್ಟಣಕ್ಕೆ	ಪೆರುಮಲೇ ಮೇಸ್ತ್ರಿಗೆ	..	೦	೬
೨೬	೨೩	೩	೬೭	ಡಿಟೋ	ಮೈಸೂರಿಗೆ	ಕೊಮಾರಪ್ಪನಿಗೆ	..	೦	೬
೨೭	೨೨	೨	೬೭	ಡಿಟೋ	ಸಂತವೇರಿಗೆ	ಡೇರ್ಟಬೀಬೀ ಸಾಹೆಬರಿಗೆ	..	೦	೬
೨೮	೨೩	೨	೬೭	ಡಿಟೋ	ಶಿಕಾರೀಪುರಕ್ಕೆ	ವೆಂಕಟೈಯ್ಯಂಗಾರ್ರಿಗೆ	..	೦	೬
೨೯	೨	೧೬	೬೭	ಡಿಟೋ	ಮೈಸೂರಿಗೆ	ಮಾಧೋಜೀಗೆ	..	೦	೬
೩೦	೨೩	೩	೬೭	ಡಿಟೋ	ನಂದಿಗೆ	ವೆಂಕೈಗೆ	..	೦	೬
೩೧	೨೮	೨	೬೭	ಡಿಟೋ	ತುಂಕೂರಿಗೆ	ಶಿಂನಾಕ್ಸಸಾಹೇಬರಿಗೆ	..	೦	೬
೩೨	೧೯	೩	೬೭	ಡಿಟೋ	ಹಿರೋಡಿಗೆ	ದಾಬಂಮಡ ಸಾಹೆಬಿಗೆ	..	೦	೬
೩೩	೧೦	೩	೬೭	ಡಿಟೋ	ಹಿರಿಯೂರಿಗೆ	ಸ್ಟಿಲರ್ಟ ಸಾಹೇಬರಿಗೆ	..	೦	೬
೩೪	೨೭	೨	೬೭	ಡಿಟೋ	ದೊಡ್ಡಬಳ್ಳಾಪುರಕ್ಕೆ	ಈರಂಣನಿಗೆ	..	೦	೬
೩೫	೫	೨	೬೭	ಬಸವನಹಳ್ಳಿ	ಹಾರನಹಳ್ಳಿಗೆ	ರಂಗಂಣನಿಗೆ	..	೦	೬
೩೬	೨೧	೩	೬೭	ಬೆಂಗಳೂರು	ದಾವಣಗೆರೆಗೆ	ಗುರುಪಾದಪ್ಪಾ	..	೦	೬

COLAR DISTRICT.

Fine, Leave and Appointment.

ಚಿಕ್ಕಬಳ್ಳಾಪುರ ತಾಲ್ಲೂಕು ಸ್ಟಾಂಪವೆಂಡರ್ ಲೆಖ್ಖಾ ತನಿಖಿ ಮಾಡಿದ ಕಸೂರಿ ಬಗ್ಯೆ ಸದರಿ ತಾಲ್ಲೂಕು ಶಿರಸ್ತೇದಾರ ಕೃಷ್ಣರಾಯರಿಗೆ ೧೦ ರೂಪಾಯಿ ನಗದಿ ಗುಮಾಸ್ತೆ ವೆಂಕಟ ನಾರಣಪ್ಪನಿಗೆ ೫ ರೂಪಾಯಿ ಜುರ್ಮಾನೆ ಮೊಕರ್ರಾಡಿ ಇರುತ್ತೆ.

ಶಿಡ್ಲಘಟ್ಟ ತಾಲ್ಲೂಕು ಅಮೀಲ್ ರಾಮಸ್ವಾಮ್ಯೆಯ್ಯನವರಿಗೆ ಬೆಂಗಳೂರಿಗೆ ಹೋಗಿ ಬರತಕ್ಕದ್ದಕ್ಕೆ ೧೫ ದಿವಸದ ರಜಾ ಮಂಜೂರಾಗಿದೆ.

ಶಿಡ್ಲಘಟ್ಟ ತಾಲ್ಲೂಕು ರೆವಿನ್ಯೂ ಗುಮಾಸ್ತೆ ವೆಂಕಟ್ಟರಾಯನಿಗೆ ತಿರಪತಿಗೆ ಹೋಗಿ ಬರತಕ್ಕದ್ದಕ್ಕೆ ೧ ತಿಂಗಳು ರಜಾ ಮಂಜೂರಾಗಿದೆ.

ಅಂಬಾಜಿ ದುರ್ಗ ತಾಲ್ಲೂಕು ಚಿಂತಾಮಣಿ ಶ್ಯಾನುಭಾವಿಕೆ ಕೆಲಸ ಶಾನುಭೋಗನ ಮಗ ಲಾಯಿಕ್ ಆಗುವ ವರಿವಿಗೆ. ಕೆಲಸ ನೋಡ ತಕ್ಕದಕ್ಕೆ ಶ್ಯಾನುಭೋಗನ ಹೆಂಡತಿ ತಮ್ಮ ಸುಬ್ಬರಾಯನಿಗೆ ಮೊಕರೂರು ಆಗಿರುತೆ.

ಗುಮ್ಮನಾಯಿಕನ ಪಾಳ್ಯ ತಾಲ್ಲೂಕು ಪೇಷ್ಕಾರ ನಿಜಾ ಮೊದ್ದೀನ್ ಖಾನರಿಗೆ ೧೦ ದಿವಸ ರಜಾ ಕೊಡಲ್ಪಟ್ಟಿದೆ.

ಗುಮ್ಮನಾಯಿಕನ ಪಾಳ್ಯ ತಾಲ್ಲೂಕು ಜೂಡೀಷಿಯಲ್ ಗುಮಾಸ್ತೆ ಭೈಯ್ಯಣ್ಣನಿಗೆ ವೆಂಕಟಾಚಾರಿ ಬದಲಿ ಮೇಲೆ ೧೫ ದಿವಸದ ರಜಾ ಕೊಡಲ್ಪಟ್ಟಿದೆ.

MYSORE DISTRICT.

Appointments and Fine.

ಚಾಮರಾಜನಗರ ತಾಲ್ಲೂಕು ಕದಿಂ ರೆವಿನ್ಯೂ ಗುಮಾಸ್ತೆ ಗುಂಡಪ್ಪನ ಖಾಯಿಷ್ ಮೇರೆ ಬದ್ಲಿ ವಗ್ಯೆರೆ ಕೆಲಸ ನೋಡುತ್ತಾಯಿದ್ದ ಯಿವರ ಅಳಿಯ ಗುಂಡಪ್ಪನ ಹೆಸರಿಗೆ ಸದರೀ ಗುಮಾಸ್ತೆ ಕೆಲಸ ಮೊಕರರ್ ಮಾಡುವದನ್ನ ಮಂಜೂರ್ಮಾಡಿ ಯಿದೆ.

ನಂಜನಗೂಡ್ ತಾಲ್ಲೂಕು ಯೇಪ್ರೆಲ್ ತಿಂಗಳ ನಾನಾವಿಧ ಧಾನ್ಯದ ನಿರಖು ಪಟ್ಟಿ ವಾಯಿದೆ ಮೇರೆ ಬಾರದೆ ಯಿದ್ದದರಿಂದ ತಾಲ್ಲೂಕು ಶಿರಸ್ತೇದಾರ್ರಿಗೆ ೨ ರೂಪಾಯಿ ಜುರ್ಮಾನೆ ಮೊಕರರ್ ಮಾಡಿ ಯಿದೆ.

ತಾರೀಖು 13ನೇ ಮಾಹೇ ಸ್ನ 1867ನೇ ಯಿಸವಿ.

T. M. McHUTCHIN.

Offg. Dy. Supt.

CHITULDROOG DISTRICT.

Leave.

ಹರಿಹರದ ತಾಲ್ಲೂಕು ಜುಡಿಷಿಯಲ್ ಗುಮಾಸ್ತೆ ಸುಬ್ಬರಾಯನಿಗೆ ಚಿತ್ರದುರ್ಗ ತಾಲ್ಲೂಕು ಬತ್ತಾ ಅಮೀನ ದಾಸಪ್ಪನ ಬದಲಿ ಮೇಲೆ ೧ ಮಾಹೆ ರಜಾ ಕೊಟ್ಟಿರುತ್ತೆ.

ಬೂದಿಹಾಳ್ ತಾಲ್ಲೂಕು ಜುಡಿಷಿಯಲ್ ಗುಮಾಸ್ತೆ ನಾರಾಯಣರಾಯನಿಗೆ ಹೆಂಡತಿ ಕಾಯಿಲೆ ಸಬಬ್ ಗುರಾಯನ ಬದ್ಲಿ ಮೇಲೆ ೧ ಮಾಹೆ ರಜಾ ಮಂಜೂರ್ಮಾಡಲ್ಪಟ್ಟಿರುತ್ತೆ.

ADVERTISEMENTS.

FOR SALE.

A hand book of the Law of Evidence in Canarese and English, by S. Venkatavaradiengar, specially designed for the use of the Amildars and other subordinate officers of this country.

Price Rupee one. Postage and packing 2 Annas. Apply to the Editor of the Carnataca Pracasica, Bangalore.

All applications should be accompanied by remittances either in money, postage labels of half anna value with the usual premium, or money order payable in Bangalore.

ಬಿಕ್ರೀ ಆಗತಕ್ಕದ್ದು.

ಮುಖ್ಯವಾಗಿ ಈ ಮೈಸೂರು ಶೀಮೆಯಲ್ಲಿಯ ಅಮಲ್‌ದಾರ್ರಿಗೋಸ್ಕರವಾಗಿಯೂ ಇತರ ಕೀಳ್ಪಟ್ಟ ಉದ್ಯೋಗಸ್ಥರಿಗೋಸ್ಕರವಾಗಿಯೂ ಶ್ರೀ. ವೆಂಕಟವರದೈಯ್ಯಂಗಾರ್ರಿಂದ ಇಂಗ್ಲಿಷ್‌ನಲ್ಲಿಯೂ ಕಂನ್ನಡದೊಳಗೂ ರಚಿಸಲ್ಪಟ್ಟ ಸಾಕ್ಷಿ ವಿಚಾರಣೆಯ ಕಾನೂನ ಸಂಗ್ರಹವು ತಯಾರಾಗಿ ವಿಕ್ರಯಕ್ಕೆ ಸಿದ್ಧವಾಗಿರುತ್ತೆ.

ಖರೀದಿ ರೂಪಾಯಿ ೧.

ಟಪಾಲ್ ಹಾಸಲ್ ಪ್ಯಾಕ್ ಮಜೂರಿ ಸಹಿತ ೨ ಆಣೆ

ಈ ಪುಸ್ತಕ ಬೇಕಾದವರು ಬೆಂಗಳೂರನಲ್ಲಿ ಕರ್ನಾಟಕ ಪ್ರಕಾಶಿಕಾ ಯೆಡಿಟರ ಹೆಸರಿಗೆ ಬರದು ಕೊಳ್ಳತಕ್ಕದ್ದು.

ಪುಸ್ತಕ ಬೇಕಾದವರು ನಗದ್ ಅಥವಾ ವಾಡಿಕೇ ಮೇರೆ ಡಿಸ್ಕೌಂಟ್ ಅಂತ ಅರ್ಧ ಆಣೇ ಬಾಬತು ಟಪಾಲ್ ಚೀಟಿಗಳು, ಅಥವಾ ಬೆಂಗಳೂರಲ್ಲಿ ಹಣ ಪಾವತಿ ಯಾಗತಕ್ಕ ಹುಂಡಿಗಳುನ್ನೀ ಬರದು ಕೊಳ್ಳತಕ್ಕದ್ದು.

LOST.

The half of the following Currency Note; intimation of loss given to the Currency Office.

Right half No. C. 23—21887, Bombay Circle, for Rupees 20.

அத்தெ கச்சேரி டவாயத்து தோதாரும்ன.

ಬಲಭಾಗ ನಂಬರ್ C. 23—21887 ಬೊಂಬಾಯಿ ಸರಕಲ್, ರೂಪಾಯಿಗಳು ೨೦.

NOTICE.

The interest and responsibility of Mr. James Edward Orr in our Firm ceased on the 28th February 1867.

BANGALORE, ORR & BARTON.
4th May 1867.

Mr. John Benjamin Barton (late of London) will sign our Firm from this date.

BANGALORE, ORR & BARTON.
4th May 1867.

ಪ್ರಕಟನೆ.

ನಮ್ಮ ಕೋಠೀಯಲ್ಲಿ ಮಿಸ್ಟರ್ ಜೇಂಸ್ ಎಡ್‌ವರ್ಡ್ ಆರ್ ಎಂಬವರಿಗಿದ್ದ ಸಂಬಂಧವೂ ಜವಾಬ್‌ದಾರಿಯೂ ಸನ ೧೮೬೭ನೇ ಇಸವಿ ಫೆಬ್ರವರಿ ೨೮ರಲ್ಲು ನಿವೃತ್ತಿಯಾಯಿತು.

ಸಾಬಕ್ ಲಂಡನ್‌ನಲ್ಲಿದ್ದ ಮಿಸ್ಟರ್ ಜಾನ್. ಬೆಂಜಮಿನ್ ಬಾರ್ಟನ್ ಯೆಂಬವರು ಈ ತಾರೀಖು ಲಾಗಾಯಿತು ನಮ್ಮ ಕೋಠೀ ಪರಪ್ ನಲ್ಲಿ ದಸ್ತಖತ್ ಮಾಡುವರು.

ಬೆಂಗಳೂರು, ORR & BARTON.
೪ನೇ ಮೇ ೧೮೬೭.

MYSORE GOVERNMENT PRESS, BANGALORE—1867.